# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2189(2552)
2. ಸದಸ್ಯರ ಹೆಸರು : ಡಾ: ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 24.03.2022.
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ವಿಶ್ವೇಶ್ವರಯ್ಯ ಜಲ ನಿಗಮವನ್ನು ಯಾವಾಗ ಸ್ಥಾಪಿಸಲಾಯಿತು; ಇದರ ಧ್ಯೇಯೋದ್ದೇಶಗಳೇನು; (ಇದರ ವ್ಯಾಪ್ತಿಯಲ್ಲಿ ಬರುವಜಿಲ್ಲೆ, ತಾಲ್ಲೂಕುಗಳ ಮಾಹಿತಿ ನೀಡುವುದು) | ವಿಶ್ವೇಶ್ವರಯ್ಯ ಜಲ ನಿಗಮವನ್ನು ದಿನಾಂಕ 20.08.2016 ರಲ್ಲಿ ಸ್ಥಾಪಿಸಲಾಗಿದ್ದು, ದಿನಾಂಕ 20.10.2016 ರಂದು ಕಂಪನಿ ಕಾಯ್ದೆ 2013, ರಡಿ ಸರ್ಕಾರದ ಸ್ವಾಮ್ಯದ ಸಂಸ್ಥೆಯಾಗಿ ನೋಂದಣಿಗೊಂಡಿರುತ್ತದೆ ಹಾಗೂ ದಿನಾಂಕ 01.01.2017ರಿಂದ ಕಾರ್ಯಾರಂಭಗೊಂಡು, ಜಲ ಸಂಪನ್ಮೂಲ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿದೆ. ನಿಗಮದ ಮೂಲ ಉದ್ದೇಶವು ಕುಡಿಯುವ ನೀರು ಮತ್ತು ನೀರಾವರಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದಾಗಿದೆ. ವಿಶ್ವೇಶ್ವರಯ್ಯ ಜಲ ನಿಗಮದ ವ್ಯಾಪ್ತಿಯಡಿ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ ಹಾಗೂ ಭದ್ರಾ ಮೇಲ್ದಂಡೆ ಯೋಜನೆಗಳ ಅನುಷ್ಠಾನ ಮತ್ತು ಗಾಯತ್ರಿ ಹಾಗೂ ವಾಣಿ ವಿಲಾಸ ಸಾಗರ ಯೋಜನೆಗಳ ನಿರ್ವಹಣಾ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದು, ಈ ಪೈಕಿ ಭದ್ರಾ ಮೇಲ್ದಂಡೆ ಯೋಜನೆ, ಗಾಯತ್ರಿ ಮತ್ತು ವಾಣಿ ವಿಲಾಸ ಸಾಗರ ಯೋಜನೆಗಳು ನೀರಾವರಿ ಯೋಜನೆಗಾಳಾಗಿದ್ದು, ಗಾಯತ್ರಿ ಮತ್ತು ವಾಣಿ ವಿಲಾಸ ಸಾಗರ ಯೋಜನೆಗಳು ಅನುಕ್ರಮವಾಗಿ 1963 ಮತ್ತು 1907 ರಲ್ಲಿ ಪೂರ್ಣಗೊಂಡಿದ್ದು, ಸದರಿ ಯೋಜನೆಗಳು ಪ್ರಸ್ತುತ ನಿರ್ವಹಣೆ ಹಂತದಲ್ಲಿವೆ.<br><br>**ನಿಗಮದ ರಚನೆಯ ಉದ್ದೇಶ, ಹಾಗೂ ಧ್ಯೇಯೋದ್ದೇಶಗಳು, ಗುರಿಗಳು, ಈ ಕೆಳಕಂಡಂತಿವೆ :**<br><br>1. ಚಿಕ್ಕಬಳ್ಳಾಪುರ ಕೋಲಾರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ, ದಾವಣಗೆರೆ ಮತ್ತು ತುಮಕೂರು ಜಿಲ್ಲೆಗಳ ಬರ ಪೀಡಿತ ಪ್ರದೇಶಗಳ ನೀರಿನ ಅಗತ್ಯತೆಯನ್ನು ಪೂರೈಸುವ ಸಲುವಾಗಿ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ ಮತ್ತು ಭದ್ರಾ ಮೇಲ್ದಂಡೆ ನೀರಾವರಿ ಯೋಜನೆಗಳನ್ನು ಹಾಗೂ ಈ ಯೋಜನೆಗಳಿಗೆ ಸಂಬಂಧಿಸಿದ ಇತರೇ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಮತ್ತು ನಿರ್ವಹಿಸುವುದು. ಅಲ್ಲದೇ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಿಗೆ ಶಾಶ್ವತ ನೀರಾವರಿ ಸೌಲಭ್ಯಕಲ್ಪಿಸಲು ಬೇರೆ ಬೇರೆ ಮೂಲಗಳಿಂದ ದೊರಕಬಹುದಾದ ಪರ್ಯಾಯ ನೀರಿನ ಲಭ್ಯತೆಗಳ ಬಗ್ಗೆ ಅಧ್ಯಯನ ನಡೆಸುವ ಸಲುವಾಗಿ ರೂಪಿಸಲಾಗಿರುವ ತಜ್ಞರ ಸಮಿತಿಯ ವರದಿಯನ್ನು ಆಧರಿಸಿ ಪ್ರಸ್ತಾಪಿಸಲಾಗುವ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು ಮತ್ತು ಕಾರ್ಯಗತಗೊಳಿಸುವುದು.<br><br>2. ನೀರಾವರಿ ಯೋಜನೆ, ಕುಡಿಯುವ ನೀರಿನ ಯೋಜನೆ, ವಿದ್ಯುತ್ ಉತ್ಪಾದನೆ ಹಾಗೂ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಕಾಮಗಾರಿಗಳನ್ನು ಒಳಗೊಂಡ ಇತರೆ ಯೋಜನೆಗಳಿಗೆ ಅಗತ್ಯವಿರುವ |

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| | | ಅಣೆಕಟ್ಟುಗಳು, ಜಲಾಶಯಗಳು, ಬ್ಯಾರೇಜುಗಳು, ವಿಯರ್‌ಗಳು, ಕಾಲುವೆಗಳು, ಏತ ನೀರಾವರಿಗಳು ಪೈಪ್‌ಲೈನ್ ಹಾಗೂ ರಸ್ತೆ ಕಾಮಗಾರಿಗಳನ್ನು ಯೋಜಿಸಿ, ತನಿಖೆ ನಡೆಸಿ, ಅಂದಾಜು ತಯಾರಿಸಿ, ನಿರ್ಮಿಸಿ, ಅದನ್ನು ನಿರ್ವಹಿಸುವುದು.<br><br>3. ನೀರಿನ ಪರಿಣಾಮಕಾರಿ ಉಪಯೋಗಕ್ಕಾಗಿ ಆಧುನಿಕ ನೀರಾವರಿ ವ್ಯವಸ್ಥೆಗಳಾದ ಹನಿ, ತುಂತುರು ಹಾಗೂ ಇತರೆ ವಿಧಾನಗಳನ್ನು ಅಳವಡಿಸಿಕೊಳ್ಳಲು ಯೋಜಿಸಿ, ಪ್ರೋತ್ಸಾಹಿಸಿ, ನಿರ್ಮಿಸುವುದು ಹಾಗೂ ಸದರಿ ಯೋಜನೆಗಳಿಂದ ಬಾಧಿತರಾದ ಸ್ಥಳೀಯ ಜನಗಳ ಪುನರ್ವಸತಿ ಸೌಲಭ್ಯಗಳನ್ನು ಒದಗಿಸುವುದು ಹಾಗೂ ಕರ್ನಾಟಕ ಸರ್ಕಾರದಿಂದ ವಹಿಸಲಾದ ಯೋಜನೆಗಳ ನಿರ್ಮಾಣ ಹಾಗೂ ನಿರ್ವಹಣೆ, ಅರಣ್ಯೀಕರಣ, ಪ್ರವಾಹ ನಿಯಂತ್ರಣಕ್ಕೆ ಸೂಕ್ತ ಮಾನದಂಡ ಅಳವಡಿಸಿಕೊಳ್ಳುವುದು ಹಾಗೂ ನದಿಗಳಲ್ಲಿ ಮತ್ತು ಜಲ ಕಾಯಗಳಲ್ಲಿ ಜಲ ಸಂಚಾರ, ಮನರಂಜನಾ ಚಟುವಟಿಕೆಗಳು ಮತ್ತು ಮೀನುಗಾರಿಕೆ ಮುಂತಾದ ಚಟುವಟಿಕೆಗಳನ್ನು ಕೈಗೊಳ್ಳಲು ಸೌಕರ್ಯ ಕಲ್ಪಿಸುವ ಮುಖಾಂತರ ಪ್ರೋತ್ಸಾಹಿಸುವುದು.<br><br>ವಿಶ್ವೇಶ್ವರಯ್ಯ ಜಲ ನಿಗಮದ ವ್ಯಾಪ್ತಿಯಲ್ಲಿ ಒಟ್ಟು 9 ಜಿಲ್ಲೆಗಳು ಹಾಗೂ 39 ತಾಲ್ಲೂಕುಗಳು ಬರುತ್ತಿದ್ದು, ವಿವರ ಇಂತಿವೆ:<br>1) ಚಿಕ್ಕಮಗಳೂರು (2 ತಾಲ್ಲೂಕುಗಳು): ತರೀಕೆರೆ, ಕಡೂರು<br>2) ಚಿತ್ರದುರ್ಗ (6 ತಾಲ್ಲೂಕುಗಳು): ಹೊಸದುರ್ಗ, ಹೊಳಲ್ಕೆರೆ, ಹಿರಿಯೂರು, ಚಿತ್ರದುರ್ಗ, ಚಳ್ಳಕೆರೆ, ಮೊಳಕಾಲ್ಮೂರು<br>3) ತುಮಕೂರು (8 ತಾಲ್ಲೂಕುಗಳು): ಚಿಕ್ಕನಾಯಕನಹಳ್ಳಿ, ಸಿರಾ, ಪಾವಗಡ, ಕೊರಟಗೆರೆ, ಮಧುಗಿರಿ, ತುಮಕೂರು, ಗುಬ್ಬಿ, ತಿಪಟೂರು<br>4) ದಾವಣಗೆರೆ (1 ತಾಲ್ಲೂಕು): ಜಗಳೂರು<br>5) ಹಾಸನ (3 ತಾಲ್ಲೂಕುಗಳು): ಸಕಲೇಶಪುರ, ಅರಸೀಕರೆ, ಆಲೂರು, ಬೇಲೂರು<br>6) ಕೋಲಾರ (5 ತಾಲ್ಲೂಕುಗಳು): ಮಾಲೂರು, ಬಂಗಾರಪೇಟೆ, ಮುಳಬಾಗಿಲು, ಶ್ರೀನಿವಾಸಪುರ, ಕೋಲಾರ<br>7) ಚಿಕ್ಕಬಳ್ಳಾಪುರ (5 ತಾಲ್ಲೂಕುಗಳು): ಬಾಗೇಪಲ್ಲಿ, ಚಿಂತಾಮಣಿ, ಗುಡಿಬಂಡೆ, ಶಿಡ್ಲಘಟ್ಟ, ಗೌರಿಬಿದನೂರು<br>8) ಬೆಂಗಳೂರು ಗ್ರಾಮಾಂತರ (4 ತಾಲ್ಲೂಕುಗಳು): ನೆಲಮಂಗಲ, ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ<br>9) ರಾಮನಗರ (4 ತಾಲ್ಲೂಕುಗಳು): ರಾಮನಗರ, ಮಾಗಡಿ, ಚನ್ನಪಟ್ಟಣ, ಕನಕಪುರ |
| ಆ) | ಈ ನಿಗಮದ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಎತ್ತಿನಹೊಳೆ ಯೋಜನೆಯ ವಿವರಗಳನ್ನು ನೀಡುವುದು; | ಎತ್ತಿನಹೊಳೆ ಯೋಜನೆಯು ಒಂದು ಸಮಗ್ರ ಕುಡಿಯುವ ನೀರಿನ ಯೋಜನೆಯಾಗಿದ್ದು, ಈ ಯೋಜನೆಯು ಪಶ್ಚಿಮಘಟ್ಟದ ಮೇಲ್ಭಾಗದಲ್ಲಿ ಹರಿಯುವ ಎತ್ತಿನಹೊಳೆ, ಕಾಡುಮನೆಹೊಳೆ, ಕೇರಿಹೊಳೆ ಮತ್ತು ಹೊಂಗದಹಳ್ಳಗಳಲ್ಲಿ ಮುಂಗಾರು ಮಳೆ ಅವಧಿಯಲ್ಲಿ 24.01 ಟಿ.ಎಂ.ಸಿ ಪ್ರಮಾಣದ ಹೆಚ್ಚುವರಿ ಹರಿವಿನ ನೀರನ್ನು ಸತತ ಬರಗಾಲದಿಂದ ಕೂಡಿರುವ ಬರಪೀಡಿತ ಪ್ರದೇಶಗಳಾದ ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳಿಗೆ ಹಾಗೂ ತುಮಕೂರು, ಚಿಕ್ಕಮಗಳೂರು, ಹಾಸನ ಜಿಲ್ಲೆಗಳಲ್ಲಿ ಆಯ್ದ |

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| | | ತಾಲ್ಲೂಕುಗಳಿಗೆ 15.029 ಟಿ.ಎಂ.ಸಿ ಕುಡಿಯುವ ನೀರನ್ನು ಒದಗಿಸುವುದು ಹಾಗೂ ಪಾಲಾರ್ ಮತ್ತು ಪೆನ್ನಾರ್ ನದಿ ಕೊಳ್ಳಗಳಲ್ಲಿ ಬರುವ 527 ಕೆರೆಗಳಿಗೆ 8.967 ಟಿ.ಎಂ.ಸಿ ಪ್ರಮಾಣದ ನೀರನ್ನು ಕೆರೆಗಳ ಸಾಮರ್ಥ್ಯದ ಶೇ.50 ರಷ್ಟು ತುಂಬಿಸಿ ಅಂತರ್ಜಲ ಮಟ್ಟವನ್ನು ಉತ್ತಮ ಪಡಿಸಲು ಉದ್ದೇಶಿಸಲಾಗಿದೆ. ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ರೂ.12,912.36 ಕೋಟಿ ಮೊತ್ತದ ಪರಿಷ್ಕೃತ ಯೋಜನಾ ವರದಿಗೆ ದಿನಾಂಕ:17.2.2014 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.<br><br>ಸದರಿ ಯೋಜನೆಯನ್ನು 02 ಹಂತಗಳಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತದೆ. |
| ಇ) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಪೂರೈಸುವ ಈ ಯೋಜನೆಯು ಆಯಾ ಜಿಲ್ಲೆಗಳಿಗೆ ಸಂಬಂಧಿಸಿದಂತೆ, ಆದ ಪ್ರಗತಿಯ ಮಾಹಿತಿಯನ್ನು ನೀಡುವುದು; | ವಿವರಗಳನ್ನು **ಅನುಬಂಧ** ದಲ್ಲಿ ಒದಗಿಸಲಾಗಿದೆ. |
| ಈ) | ಈ ಯೋಜನೆಯು ಪ್ರಾರಂಭವಾಗಿ 10 ವರ್ಷಗಳಾದರೂ ಇನ್ನೂ ಈ ಮಾರ್ಗದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಪ್ರಗತಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನಾ ಕಾಮಗಾರಿಗಳು ಈ ಕೆಳಕಂಡ ಕಾರಣಗಳಿಂದಾಗಿ ವಿಳಂಬವಾಗಿರುತ್ತದೆ.<br><br>➢ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ lift component ಕಾಮಗಾರಿಗೆ ಅಗತ್ಯವಿರುವ ಖಾಸಗಿ ಜಮೀನನ್ನು (448 ಎ-33 ಗುಂ) ಭೂಸ್ವಾಧೀನಪಡಿಸಿಕೊಳ್ಳಲು ನೇರ ಖರೀದಿಯಡಿ (direct purchase) ದರಗಳನ್ನು ನಿರ್ಧರಿಸಲು ಭೂಮಾಲೀಕರ ಆಕ್ಷೇಪಣೆಯಿಂದ ಉಂಟಾಗಿರುವ ವಿಳಂಬದಿಂದಾಗಿ ಕಾಮಗಾರಿಯು ಕುಂಠಿತವಾಗಿರುತ್ತದೆ. ಪ್ರಸ್ತುತ, 448 ಎ – 33 ಗುಂ ಖಾಸಗಿ ಜಮೀನಿನಲ್ಲಿ ನೇರ ಖರೀದಿ ಮೂಲಕ 392 ಎ 12 ಗುಂ ಜಮೀನನ್ನು ಖರೀದಿಸಲಾಗಿರುತ್ತದೆ. ಉಳಿದ ಜಮೀನಿನ ಭೂಸ್ವಾಧೀನ ಪ್ರಕ್ರಿಯೆಯು ವಿವಿಧ ಹಂತದಲ್ಲಿರುತ್ತದೆ.<br><br>➢ ಎತ್ತಿನಹೊಳೆ ಯೋಜನೆಯ ಅರಣ್ಯ ತೀರುವಳಿಗೆ ಸಂಬಂಧಿಸಿದಂತೆ, ರಾಷ್ಟ್ರೀಯ ಹಸಿರು ನ್ಯಾಯ ಪೀಠದಲ್ಲಿ ಒಟ್ಟು 7 ಪ್ರಕರಣಗಳು ದಾಖಲಾಗಿದ್ದು (ಸಕಲೇಶಪುರ ತಾಲ್ಲೂಕಿನಲ್ಲಿ 13.93 ಹೆ. ಅರಣ್ಯ ಭೂಮಿಯನ್ನು ವರ್ಗಾಯಿಸಲು ನೀಡಲಾದ ಶಾಸನಬದ್ಧ ಅನುಮತಿ ವಿರುದ್ಧ ನೀಡಲಾದ ಮೇಲ್ಮನವಿ ಸೇರಿದಂತೆ), ಇದರಿಂದ ಕಾಮಗಾರಿ ಅನುಷ್ಠಾನದಲ್ಲಿ ಅಡತಡೆ ಉಂಟಾಗಿರುತ್ತದೆ. ರಾಷ್ಟ್ರೀಯ ಹಸಿರು ನ್ಯಾಯ ಪೀಠದಲ್ಲಿ ದಾಖಲಾಗಿದ್ದ ಎಲ್ಲಾ 7 ಪ್ರಕರಣಗಳು ಅಂತಿಮವಾಗಿ ದಿನಾಂಕ: 24.05.2019 ರ ತೀರ್ಪಿನಲ್ಲಿ ನಿಗಮದ ಪರವಾಗಿ ಇತ್ಯರ್ಥವಾಗಿರುತ್ತವೆ.<br><br>➢ ಖಾಸಗಿ ಜಮೀನು ಮತ್ತು ಅರಣ್ಯ ಇಲಾಖೆಯ ಜಮೀನುಗಳನ್ನು ಗುರುತಿಸುವಲ್ಲಿ ಉಂಟಾಗುತ್ತಿರುವ ಗೊಂದಲ ಮತ್ತು ವಿಳಂಬದಿಂದ ಕೆಲವು ಪ್ರದೇಶಗಳಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಲ್ಲಿ ವಿಳಂಬವಾಗಿರುತ್ತದೆ. |

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| | | ➢ ಸದರಿ ಯೋಜನೆಯ ಈಗಾಗಲೇ ಪ್ರಗತಿಯಲ್ಲಿರುವ ಬಹುತೇಕ ಕಾಮಗಾರಿಗಳ ಭೂಸ್ವಾಧೀನ ಪ್ರಕ್ರಿಯೆಯು 19(1) ಹಂತದಲ್ಲಿದ್ದು, ಅನುದಾನದ ಕೊರತೆಯಿಂದಾಗಿ ಭೂಸ್ವಾಧೀನ ಪ್ರಕ್ರಿಯೆಯನ್ನು ಮುಂದುವರೆಸುವಲ್ಲಿ ವಿಳಂಬವಾಗುತ್ತಿದೆ.<br>➢ ರಾಷ್ಟ್ರೀಯ ಹೆದ್ದಾರಿ, ರೈಲ್ವೆ, ಪೆಟ್ರೋನೆಟ್ ಮತ್ತು ಗೇಲ್ ಕ್ರಾಸಿಂಗ್‌ಗಳಿಗೆ ಸಂಬಂಧಿಸಿದ ಅನುಮತಿ ದೊರೆಯುವಲ್ಲಿ ಉಂಟಾಗಿರುವ ವಿಳಂಬ.<br>➢ ಭೈರಗೊಂಡ್ಲು ಜಲಾಶಯ ನಿರ್ಮಾಣ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಗುತ್ತಿಗೆದಾರರಿಗೆ ವಹಿಸಲಾಗಿದ್ದು, ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಗೊಳ್ಳುವ ಸಂದರ್ಭದಲ್ಲಿ ಕೊರಟಗೆರೆ ತಾಲ್ಲೂಕಿನ ರೈತರು ದೊಡ್ಡಬಳ್ಳಾಪುರ ತಾಲ್ಲೂಕಿನ ರೈತರಿಗೆ ನೀಡುವ ಪರಿಹಾರ ದರದಂತೆ ಅವರಿಗೂ ಸಹಾ ಏಕರೂಪ ದರ ನೀಡಲು ಒತ್ತಾಯಿಸಿದ್ದರಿಂದ ಕಾಮಗಾರಿಗಳಿಗೆ ಅಡೆತಡೆ ಉಂಟಾಗಿರುತ್ತದೆ. ಈ ಕಾರಣದಿಂದಾಗಿ ಭೂಮಿ ವಶಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಾರಂಭಿಸುವಲ್ಲಿ ವಿಳಂಬವಾಗಿರುತ್ತದೆ.<br>➢ ಯೋಜನೆಗೆ ಅವಶ್ಯವಿರುವ ಭೂಮಿಯ ಸ್ವಾಧೀನಕ್ಕಾಗಿ 2013ರ ಭೂಸ್ವಾಧೀನ ಕಾಯ್ದೆಯಂತೆ ಪ್ರಾರಂಭಿಕ ಹಂತ 11(1) ನೋಟಿಫಿಕೇಷನ್‌ನಿಂದ ಅವಾರ್ಡ್ ಹಂತದ ವರೆಗೆ ಸುಮಾರು 36 ರಿಂದ 48 ತಿಂಗಳವರೆಗೆ ಸಮಯಾವಕಾಶ ಬೇಕಾಗಿರುತ್ತದೆ. ಭೂಸ್ವಾಧೀನ ಪ್ರಕ್ರಿಯೆಯು ಪೂರ್ಣಗೊಂಡು, ರೈತರಿಗೆ ಹಣ ಪಾವತಿಯಾಗುವವರೆಗೂ ಜಮೀನನ್ನು ನೀಡಲು ರೈತರು ತೀವ್ರ ವಿರೋಧ ವ್ಯಕ್ತಪಡಿಸುತ್ತಿರುವುದರಿಂದ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ವಿಳಂಭವಾಗುತ್ತಿದೆ ಹಾಗೂ ಅಂತಿಮ ನೋಟೀಸನ್ನು ನೀಡಿದರೂ ಸಹ ಭೂಮಾಲಿಕರು ಹಣ ಸ್ವೀಕರಿಸದೇ ಕಾಲ ವಿಳಂಭ ಮಾಡುತ್ತಿರುತ್ತಾರೆ. ಇಂತಹ ಸನ್ನೀವೇಶಗಳಲ್ಲಿ ಭೂಕಾಯ್ದೆ ಪ್ರಕಾರ 60 ದಿನಗಳ ನಂತರ ಹಣವನ್ನು ನ್ಯಾಯಾಲಯಕ್ಕೆ ಠೇವಣಿ ಮಾಡಿ ನಂತರ ಜಮೀನನ್ನು ಇಲಾಖೆಗೆ ಕಾಮಗಾರಿ ನಿರ್ವಹಿಸಲು ತೆಗೆದುಕೊಳ್ಳಲು ಬಹಳ ಸಮಯ ವ್ಯತ್ಯಯವಾಗುತ್ತಿದೆ. ಭೂಪರಿಹಾರ ಪಡೆಯುವ ಸಂದರ್ಭದಲ್ಲಿ ರೈತರು ದಾಖಲಾತಿಗಳನ್ನು ಒದಗಿಸಲು ವಿಳಂಭವಾಗಿರುತ್ತದೆ. ಆದರೂ ಸಹ ಕೆಲವೊಂದು ರೈತರನ್ನು ಮನವೊಲಿಸಿ ಒಪ್ಪಿಗೆ ಪಡೆದು ತ್ರಿಪಕ್ಷೀಯ ಕರಾರು ಒಪ್ಪಂದ ಮಾಡಿಕೊಂಡು ಕೆಲಭಾಗಗಳಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳಲಾಗಿರುತ್ತದೆ.<br>➢ ಯೋಜನೆಯ ಕಾಮಗಾರಿಗಳಿಗಾಗಿ ಅಗತ್ಯ ವಾರ್ಷಿಕ ಆರ್ಥಿಕ ಸಂಪನ್ಮೂಲಗಳ ಲಭ್ಯತೆಯಲ್ಲಿನ ಕೊರತೆ. |
| ಉ) | ಯಾವ ಕಾಲಮಿತಿಯೊಳಗೆ ಈ ಯೋಜನೆಯ ಕಾಮಗಾರಿಗಳನ್ನು ಪೂರ್ತಿಗೊಳಿಸಿ ನೀರನ್ನು ಹಂಚಲಾಗುವುದು? (ವಿವರ ನೀಡುವುದು) | ಸದರಿ ಯೋಜನೆಯ ಕಾಮಗಾರಿಗಳಿಗಾಗಿ ಭೂಸ್ವಾಧೀನ ಪ್ರಕ್ರಿಯೆ ಮತ್ತು ಅರಣ್ಯ ತೀರುವಳಿಗೆ ಸಂಬಂಧಿಸಿದ ಹಾಗೂ ಇನ್ನಿತರೆ ಇಲಾಖೆಗಳಿಂದ ಅವಶ್ಯಕ ಅನುಮೋದನೆ ಪಡೆದು ಹಾಗೂ ಕಾನೂನು ತೊಡಕುಗಳನ್ನು ನಿವಾರಿಸಿಕೊಂಡು ಮತ್ತು ಬಾಕಿ ಕಾಮಗಾರಿಗಳಿಗೆ ಅಗತ್ಯವಿರುವ ಆರ್ಥಿಕ ಸಂಪನ್ಮೂಲಗಳನ್ನು ಆದ್ಯತೆ ಅನುಸಾರ ಒದಗಿಸಿಕೊಂಡು ಭೈರಗೊಂಡ್ಲು ಜಲಾಶಯದ ವರೆಗಿನ ಕಾಮಗಾರಿಗಳನ್ನು ಸೆಪ್ಟೆಂಬರ್ 2022 ರ ಅಂತ್ಯದ ಒಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ. |

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| | | ಭೈರಗೊಂಡ್ಲು ಜಲಾಶಯ ನಿರ್ಮಾಣ ಕಾಮಗಾರಿ, ಭೈರಗೊಂಡ್ಲು ಜಲಾಶಯದಿಂದ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ನೀರೊದಗಿಸುವ ಭೈರಗೊಂಡ್ಲು ನಂತರದ ಲಿಫ್ಟ್ ಕಾಮಗಾರಿ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಫೀಡರ್ ಕಾಲುವೆ ಕಾಮಗಾರಿಗಳನ್ನು ಭೈರಗೊಂಡ್ಲು ಜಲಾಶಯ ನಿರ್ಮಾಣದ ಪರ್ಯಾಯ ಪ್ರಸ್ತಾವನೆ ಒಳಗೊಂಡ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಪುನರ್ ಪರಿಷ್ಕೃತ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ಪಡೆದುಕೊಂಡು ಕೈಗೆತ್ತಿಕೊಳ್ಳಲು ನಿಯಮಾನುಸಾರ ಕ್ರಮ ಜರುಗಿಸಲಾಗುತ್ತಿದೆ.<br><br>ಭೂಸ್ವಾಧೀನಕ್ಕೆ/ ಕಾಮಗಾರಿಗಳಿಗೆ ಅವಶ್ಯವಿರುವ ವಾರ್ಷಿಕ ಅನುದಾನದ ಲಭ್ಯತೆಯನ್ನು ಆಧರಿಸಿ, ಯೋಜನೆಯ ಪುನರ್ ಪರಿಷ್ಕೃತ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ಪಡೆದುಕೊಂಡು 2023-24 ರ ಅಂತ್ಯಕ್ಕೆ ಸದರಿ ಯೋಜನೆಯನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಅವಶ್ಯಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |

**ಸಂಖ್ಯೆ: ಜಸಂಇ 46 ಡಬ್ಲ್ಯೂಎಲ್‌ಎ 2022**

(ಗೋವಿಂದ ಎಂ. ಕಾರಜೋಳ)
ಜಲಸಂಪನ್ಮೂಲ ಸಚಿವರು

# ಅನುಬಂಧ

## ವಿಧಾನ ಪರಿಷತ್ ಸದಸ್ಯರಾದ ಡಾ॥ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) ಇವರ ಪ್ರಶ್ನೆ ಸಂಖ್ಯೆ 2189 (2552) ಕ್ಕೆ ಅನುಬಂಧ

## ಎತ್ತಿನಹೊಳೆ ಯೋಜನೆಯ ಪ್ರಗತಿ ವಿವರಗಳು

ರೂ.ಕೋಟಿಗಳಲ್ಲಿ

| ಕ್ರ ಸಂ | ಜಿಲ್ಲೆ | ಯೋಜನೆ/ಕಾಮಗಾರಿ ಹೆಸರು | ಗುತ್ತಿಗೆ ಮೊತ್ತ | ಯೋಜನೆ/ಕಾಮಗಾರಿಯ ಪ್ರಗತಿ |
|---|---|---|---|---|
| 1 | ಹಾಸನ | ಸಮೀಕ್ಷೆ, ತನಿಖೆ, ವಿನ್ಯಾಸ ಮತ್ತು ಡೈವರ್ಷನ್ ವಿಯರ್ 1 – ಇಂಟೇಕ್ ಫೋರ್ ಬೇ ಪಂಪ್ ಹೌಸ್, ಇಒಟಿ ಕ್ರೇನ್, ಡಿಸಿ ನಂ.3, ಎಂ.ಎಸ್ ರೈಸಿಂಗ್ ಮೈನ್ಸ್, ಎಲ್ಲಾ ರೀತಿಯ ಕವಾಟಗಳು, ಆಂಕರ್ / ಥ್ರಸ್ಟ್ ಬ್ಲಾಕ್, ಸರ್ಜ್ ರಕ್ಷಣಾ ಕಾರ್ಯಗಳು, ಸಿವಿಲ್ ಕೆಲಸಗಳ ಸಮೀಕ್ಷೆ, ತನಿಖೆ, ವಿನ್ಯಾಸ ಮತ್ತು ನಿರ್ಮಾಣ 220 ಕೆವಿ/11ಕೆವಿ ವಿದ್ಯುತ್ ಪ್ರಸರಣಾ ಕೇಂದ್ರಗಳ ನಿರ್ಮಾಣಕ್ಕೆ ಅಗತ್ಯವಾದ ಸಿವಿಲ್ ಕಾಮಗಾರಿಗಳನ್ನು ಒಳಗೊಂಡಂತೆ ಹೇಮಾವತಿ ನದಿ ಮತ್ತು ರೈಲ್ವೆ ಮಾರ್ಗವನ್ನು ದಾಟಲು ಸೇತುವೆ ಕಾಮಗಾರಿಗಳು, ಸಕ್ಷಮ ಅಧಿಕಾರಿಗಳಿಂದ ಪರಿಸರ ಅನುಮತಿ ಮತ್ತು ಇತರ ಶಾಸನಬದ್ಧ ಅನುಮತಿಗಳನ್ನು ಪಡೆಯುವುದು. ಒಟ್ಟು ಮೊತ್ತದ ಟರ್ನ ಕೀ ಆಧಾರದ ಎತ್ತಿನಹೊಳೆ ಯೋಜನೆಯಡಿ ಯಶಸ್ವಿಯಾಗಿ ಕಾರ್ಯಾರಂಭ ಮಾಡಿದ ನಂತರ 5 ವರ್ಷಗಳ ಅವಧಿಗೆ ಶಿಫಾರಸ್ಸು ಮಾಡಲಾದ ಬಿಡಿ ಭಾಗಗಳು ಮತ್ತು ಪರಿಕರಗಳ ಪೂರೈಕೆ, ಕಾರ್ಯಚರಣೆ ಹಾಗೂ ನಿರ್ವಹಣೆ. ಪ್ಯಾಕೇಜ್–I | 448.57 | 95% ಕಾಮಗಾರಿಯು ಪೂರ್ಣಗೊಂಡಿರುತ್ತದೆ |
| 2 | ಹಾಸನ | ಸರ್ವೇ ಸಮೀಕ್ಷೆ, ತನಿಖೆ, ವಿನ್ಯಾಸ ಮತ್ತು ವಿತರಣಾ ತೊಟ್ಟಿ (ಡಿಸಿ–I) ನಿರ್ಮಾಣ, ಇಂಟೆಕ್ ಫೋರ್ ಬೇ, ಪಂಪ್ ಹೌಸ್, ಇಒಟಿ ಕ್ರೇನ್, ಎಂ.ಎಸ್ ರೈಸಿಂಗ್ ಮೈನ್ಸ್, ಎಲ್ಲಾ ರೀತಿಯ ಕವಾಟಗಳು (ವಾಲ್ವ್), ಆಂಕರ್ / ಥ್ರಸ್ಟ್ ಬ್ಲಾಕ್, ಸರ್ಜ್ ರಕ್ಷಣಾ ಕಾರ್ಯಗಳು, ಸಿವಿಲ್ ಕೆಲಸಗಳ ಸಮೀಕ್ಷೆ, ತನಿಖೆ, ವಿನ್ಯಾಸ ಮತ್ತು ನಿರ್ಮಾಣ 220 ಕೆವಿ/11ಕೆವಿ ವಿದ್ಯುತ್ ಪ್ರಸರಣಾ ಕೇಂದ್ರಗಳ ನಿರ್ಮಾಣಕ್ಕೆ ಅಗತ್ಯವಾದ ಸಿವಿಲ್ ಕಾಮಗಾರಿಗಳು, ಸಕ್ಷಮ ಅಧಿಕಾರಿಗಳಿಂದ ಪರಿಸರ ಅನುಮತಿ ಮತ್ತು ಇತರ ಶಾಸನಬದ್ಧ ಅನುಮತಿಗಳನ್ನು ಪಡೆಯುವುದು. ಒಟ್ಟು ಮೊತ್ತದ ಟರ್ನ ಕೀ ಆಧಾರದಲ್ಲ ಎತ್ತಿನಹೊಳೆ ಯೋಜನಯಡಿ ಯಶಸ್ವಿಯಾಗಿ ಕಾರ್ಯಾರಂಭ ಮಾಡಿದ ನಂತರ 5 ವರ್ಷಗಳ ಅವಧಿಗೆ ಶಿಫಾರಸ್ಸು ಮಾಡಲಾದ ಬಿಡಿ ಭಾಗಗಳು ಮತ್ತು ಪರಿಕರಗಳ ಪೂರೈಕೆ ಕಾರ್ಯಚರಣೆ ಹಾಗೂ ನಿರ್ವಹಣೆ. –ಪ್ಯಾಕೇಜ್–2 | 685.79 | 95% ಕಾಮಗಾರಿಯು ಪೂರ್ಣಗೊಂಡಿರುತ್ತದೆ |
| 3 | ಹಾಸನ | ಸರ್ವೇ, ಸಮೀಕ್ಷೆ, ತನಿಖೆ, ವಿನ್ಯಾಸ ಮತ್ತು ವಿತರಣಾ ತೊಟ್ಟಿ (ಡಿಸಿ–4) ನಿರ್ಮಾಣ, ಇಂಟೆಕ್ ಫೋರ್ ಬೇ, ಪಂಪ್ ಹೌಸ್, ಇಒಟಿ ಕ್ರೇನ್, ಎಂ.ಎಸ್ ರೈಸಿಂಗ್ ಮೈನ್ಸ್, ಎಲ್ಲಾ ರೀತಿಯ ಕವಾಟಗಳು (ವಾಲ್ವ್), ಆಂಕರ್ / ತ್ರಸ್ಟ್ ಬ್ಲಾಕ್‌ಗಳು, ಸರ್ಜ್ ರಕ್ಷಣಾ ಕಾರ್ಯಗಳು, ಸಿವಿಲ್ ಕೆಲಸಗಳ ಸಮೀಕ್ಷೆ, ತನಿಖೆ, ವಿನ್ಯಾಸ ಮತ್ತು ನಿರ್ಮಾಣ 220 ಕೆವಿ/11ಕೆವಿ ವಿದ್ಯುತ್ ಪ್ರಸರಣಾ ಕೇಂದ್ರಗಳ ನಿರ್ಮಾಣಕ್ಕೆ ಅಗತ್ಯವಾದ ಸಿವಿಲ್ ಕಾಮಗಾರಿಗಳು, 220ಕೆ.ವಿ ಲಲೋ ವ್ಯವಸ್ಥೆ, ಸಕ್ಷಮ ಅಧಿಕಾರಿಗಳಿಂದ ಪರಿಸರ ಅನುಮತಿ ಮತ್ತು ಇತರ ಶಾಸನದ್ಧ ಅನುಮತಿಗಳನ್ನು ಪಡೆಯುವುದು. ಒಟ್ಟು ಮೊತ್ತದ ಟರ್ನ ಕೀ ಆಧಾರದಲ್ಲಿ ಎತ್ತಿನಹೊಳೆ ಯೋಜನಯಡಿ ಯಶಸ್ವಿಯಾಗಿ ಕಾರ್ಯಾರಚಣೆ ಮಾಡಿದ ನಂತರ 5 ವರ್ಷಗಳ ಅವಧಿಗೆ ಶಿಫಾರಸ್ಸು ಮಾಡಲಾದ ಬಿಡಿ ಭಾಗಗಳು ಮತ್ತು ಪರಿಕರಗಳ ಪೂರೈಕೆ ಕಾರ್ಯಚರಣೆ ಹಾಗೂ ನಿರ್ವಹಣೆ–ಪ್ಯಾಕೇಜ್–3 | 1135.03 | 95% ಕಾಮಗಾರಿಯು ಪೂರ್ಣಗೊಂಡಿರುತ್ತದೆ |
| 4 | ಹಾಸನ | ಕಾಮಗಾರಿಯ ಹೆಸರು: ಸರ್ವೇ, ಸಮೀಕ್ಷೆ, ತನಿಖೆ, ವಿನ್ಯಾಸ ಮತ್ತು ಡೈವರ್ಷನ್ ವಿಯರ್ –2 ಅಡ್ಡಲಾಗಿ ಎತ್ತಿನಹೊಳೆ ಟ್ರಿಬ್ಯುಟರಿ–I, ವಿಯರ್–6 ಅಡ್ಡಲಾಗಿ ಕರೆಹೊಳೆ ಹಳ್ಳ, ವಿಯರ್–7 ಅಡ್ಡಲಾಗಿ ಹೊಂಗಡ ಹಳ್ಳ, ಇಂಟೇಕ್ ಫೋರ್ ಬೇ, ಜಾಕ್ ವೆಲ್ ಕಂ ಪಂಪ್ ಹೌಸ್ 4 ಸ್ಥಳಗಳಲ್ಲಿ , ಡಿಸಿ–5, ಇಒಟಿ ಕ್ರೇನ್, ಎಂ.ಎಸ್ ರೈಸಿಂಗ್ ಮೈನ್ಸ್, ಎಲ್ಲಾ ರೀತಿಯ ಕವಾಟಗಳು, ಆಂಕರ್ / ತ್ರಸ್ಟ್ ಬ್ಲಾಕ್‌ಗಳು, ಸರ್ಜ್ ರಕ್ಷಣಾ ಕಾರ್ಯಗಳು, ಸಿವಿಲ್ ಕೆಲಸಗಳ ಸಮೀಕ್ಷೆ, ತನಿಖೆ, ವಿನ್ಯಾಸ ಮತ್ತು ನಿರ್ಮಾಣ 66 ಕೆವಿ/11ಕೆವಿ ವಿದ್ಯುತ್ ಪ್ರಸರಣಾ ಕೇಂದ್ರಗಳ ನಿರ್ಮಾಣಕ್ಕೆ ಅಗತ್ಯವಾದ ಸಿವಿಲ್ ಕಾಮಗಾರಿಗಳನ್ನು ಒಳಗೊಂಡಂತೆ ಸೇತುವೆ ಕಾಮಗಾರಿಗಳು, ಸಕ್ಷಮ ಅಧಿಕಾರಿಗಳಿಂದ ಪರಿಸರ ಅನುಮತಿ ಮತ್ತು ಇತರ ಶಾಸನದ್ಧ ಅನುಮತಿಗಳನ್ನು ಪಡೆಯುವುದು. ಒಟ್ಟು ಮೊತ್ತದ ಟರ್ನ ಕೀ ಆಧಾರದಲ್ಲಿ ಎತ್ತಿನಹೊಳ ಯೋಜನಯಡಿ ಯಶ ಸ್ವಿಯಾಗಿ ಕಾರ್ಯಾರಂಭ ಮಾಡಿದ ನಂತರ 5 ವರ್ಷಗಳ ಅವಧಿಗೆ ಶಿಫಾರಸ್ಸು ಮಾಡಲಾದ ಭಾಗಗಳು ಮತ್ತು ಪರಿಕರಗಳ ಪೂರೈಕೆ ಕಾರ್ಯಚರಣೆ ಹಾಗೂ ನಿರ್ವಹಣೆ.ಪ್ಯಾಕೇಜ್–4 | 903.83 | 95% ಕಾಮಗಾರಿಯು ಪೂರ್ಣಗೊಂಡಿರುತ್ತದೆ |

| ಕ್ರ ಸಂ | ಜಿಲ್ಲೆ | ಯೋಜನೆ/ಕಾಮಗಾರಿ ಹೆಸರು | ಗುತ್ತಿಗೆ ಮೊತ್ತ | ಯೋಜನೆ/ಕಾಮಗಾರಿಯ ಪ್ರಗತಿ |
|---|---|---|---|---|
| 5 | ಹಾಸನ | ಕಾಮಗಾರಿಯ ಹೆಸರು: ಸರ್ವೇ, ಸಮೀಕ್ಷೆ, ತನಿಖೆ, ವಿನ್ಯಾಸ ಮತ್ತು ಡೈವರ್ಷನ್ ವಿಯರ್ 3 ಅಡ್ಡಲಾಗಿ ಟ್ರಿಬ್ಯುಟರಿ . ವಿಯರ್-4 ಅಡ್ಡಲಾಗಿ ಕಾಡುಮನೆ ಹೊಳೆ-1, ವಿಯರ್-5 ಅಡ್ಡಲಾಗಿ ಕಾಡುಮನೆ ಹೊಳೆ-2 ಇಂಟೇಕ್ ಫೋರ್ ಬೇ . ಜಾಕ್ ವೆಲ್ ಕಂ ಪಂಪ್ ಹೌಸ್ 4 ಸ್ಥಳಗಳಲ್ಲ, ಡಿಸಿ-5, ಇಒಟಿ ಕ್ರೇನ್, ಎಂಎಸ್ ರೈಸಿಂಗ್ ಮೈನ್ಸ್, ಎಲ್ಲಾ ರೀತಿಯ ಕವಾಟಗಳು, ಆಂಕರ್ / ತ್ರಸ್ಟ್ ಬ್ಲಾಕ್‌ಗಳು, ಸರ್ಜ್ ರಕ್ಷಣಾ ಕಾರ್ಯಗಳು, ಸಿವಿಲ್ ಕೆಲಸಗಳ ಸಮೀಕ್ಷೆ, ತನಿಖೆ, ವಿನ್ಯಾಸ ಮತ್ತು ನಿರ್ಮಾಣ 66 ಕೆವಿ/6.6ಕೆವಿ ವಿದ್ಯುತ್ ಪ್ರಸರಣಾ ಕೇಂದ್ರಗಳ ನಿರ್ಮಾಣಕ್ಕೆ ಅಗತ್ಯವಾದ ಸಿವಿಲ್ ಕಾಮಗಾರಿಗಳನ್ನು ಒಳಗೊಂಡಂತೆ ಸೇತುವೆ ಕಾಮಗಾರಿಗಳು. ಸಕ್ಷಮ ಅಧಿಕಾರಿಗಳಿಂದ ಪರಿಸರ ಅನುಮತಿ ಮತ್ತು ಇತರ ಶಾಸನದ್ಧ ಅನುಮತಿಗಳನ್ನು ಪಡೆಯುವುದು. ಒಟ್ಟು ಮೊತ್ತದ ಟರ್ನ ಕೀ ಆಧಾರದಲ್ಲಿ ಎತ್ತಿನಹೊಳೆ ಯೋಜನಯಡಿ ಯಶಸ್ವಿಯಾಗಿ ಕಾರ್ಯಾರಂಭ ಮಾಡಿದ ನಂತರ 5 ವರ್ಷಗಳ ಅವಧಿಗೆ ಶಿಫಾರಸ್ಸು ಮಾಡಲಾದ ಭಾಗಗಳು ಮತ್ತು ಪರಿಕರಗಳ ಪೂರೈಕೆ ಕಾರ್ಯಚರಣೆ ಹಾಗೂ ನಿರ್ವಹಣೆ-ಪ್ಯಾಕೇಜ್-5 | 543.28 | 95% ಕಾಮಗಾರಿಯು ಪೂರ್ಣಗೊಂಡಿರುತ್ತದೆ |
| 6 | ಹಾಸನ | ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆಗೆ 400 ಕೆವಿ / 220 ಕೆವಿ / 66 ಕೆವಿ /ವಿದ್ಯುತ್ ಸಬ್ ಸ್ಟೇಷನ್ ಕಾಮಗಾರಿ | 265.94 | ಕಾಮಗಾರಿಯು ಬಹುತೇಕ ಪೂರ್ಣಗೊಂಡಿರುತ್ತದೆ. |
| 7 | ಹಾಸನ | ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆಗೆ 220 ಕೆವಿ / 66 ಕೆವಿ /ವಿದ್ಯುತ್ ಸಬ್ ಸ್ಟೇಷನ್ ಕಾಮಗಾರಿ | 132.62 | ಕಾಮಗಾರಿಯು ಬಹುತೇಕ ಪೂರ್ಣಗೊಂದಿರುತ್ತದೆ. |
| 8 | ಹಾಸನ | ಎತ್ತಿನಹೊಳೆ ಯೋಜನೆಯ ಗುರುತ್ವಾ ಕಾಲುವೆ ಚೈ.0.00 ರಿಂದ 1.56 ಕಿಮೀ ಸುರಂಗ ಮಾರ್ಗ ಮತ್ತು 5.44 ರಿಂದ 6.68 ಅಕ್ವಾಡಕ್ಟ್ ಕಿಮೀ ನಿರ್ಮಾಣ, ಮಣ್ಣು ಅಗೆತ, ಒಡ್ಡು ನಿರ್ಮಾಣ. ಕಾಂಕ್ರೀಟ್ ಲೈನಿಂಗ್ ಜೊತೆಗ ಸಿಡಿ. ಆರ್.ಸಿ.ಸಿ ಟ್ರಫ್ ಅಕ್ವಾಡಕ್ಟ್ ನಿರ್ಮಾಣ-ಪ್ಯಾಕೇಜ್ 1ಎ | 394.79 | 1.15 ಕಿ.ಮೀ ಉದ್ದದ ಸುರಂಗ ಮಾರ್ಗ ನಿರ್ಮಾಣ ಕಾಮಗಾರಿಯಲ್ಲಿ 0.940 ಕಿ.ಮೀ ಸುರಂಗ ಮಾರ್ಗ ಪೂರ್ಣಗೊಳ್ಳುವ ಹಂತದಲ್ಲಿದ್ದು, ಉಳಿಕೆ 0.21 ಕಿ.ಮೀ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br>1.24 ಕಿ.ಮೀ ಉದ್ದದ ಮೇಲ್ಗಾಲುವೆ ನಿರ್ಮಾಣ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ |
| 9 | ಹಾಸನ | ಎತ್ತಿನಹೊಳೆ ಯೋಜನೆಯ ಗುರುತ್ವಾ ಕಾಲುವೆ ಚೈ.7.00 ರಿಂದ 14.00 ಕಿಮೀ ರವರೆಗೆ ಮಣ್ಣು ಅಗೆತ, ಒಡ್ಡು ನಿರ್ಮಾಣ. ಕಾಂಕ್ರೀಟ್ ಲೈನಿಂಗ್ ಜೊತೆಗೆ ಸಿಡಿ. ಆರ್.ಸಿ.ಸಿ ಟ್ರಫ್ ಅಕ್ವಾಡಕ್ಟ್ ನಿರ್ಮಾಣ-ಪ್ಯಾಕೇಜ್-2 | 147.36 | 6.43 ಕಿ.ಮೀ ಉದ್ದದ ಗುರುತ್ವಾ ಕಾಲುವೆ ಕಾಮಗಾರಿಯಲ್ಲಿ 5.13 ಕಿ.ಮೀ ಮಣ್ಣಿನ ಅಗೆತ ಪೂರ್ಣಗೊಂಡಿದ್ದು, ಬಾಕಿ 1.30 ಕಿ.ಮೀ ಕಾಮಗಾರಿಯನ್ನು ಕೈಗೊಳ್ಳಬೇಕಾಗಿರುತ್ತದೆ.<br>0.57 ಕಿ.ಮೀ ಉದ್ದದ ಮೇಲ್ಗಾಲುವೆ ಕಾಮಗಾರಿಯು ಪೂರ್ಣಗೊಂಡಿರುತ್ತದೆ |
| 10 | ಹಾಸನ | ಎತ್ತಿನಹೊಳೆ ಯೋಜನೆಯ ಗುರುತ್ವಾ ಕಾಲುವೆ ಚೈ.14.00 ರಿಂದ 24.00 ಕಿಮೀ ರವರೆಗೆ ಮಣ್ಣು ಅಗೆತ, ಒಡ್ಡು ನಿರ್ಮಾಣ. ಕಾಂಕ್ರೀಟ್ ಲೈನಿಂಗ್ ಜೊತೆಗೆ ಸಿಡಿ. ಆರ್.ಸಿ.ಸಿ ಟ್ರಫ್ ಅಕ್ವಾಡಕ್ಟ್ ನಿರ್ಮಾಣ-ಪ್ಯಾಕೇಜ್-3 | 322.84 | 6.49 ಕಿ.ಮೀ ಉದ್ದದ ಕಾಲುವೆ ಕಾಮಗಾರಿಯಲ್ಲಿ 4.00 ಕಿ.ಮೀ ಕಾಮಗಾರಿಯು ಪೂರ್ಣಗೊಂಡಿದ್ದು, 2.49 ಕಿ.ಮೀ ಕಾಮಗಾರಿಯು ಪ್ರಗತಿಯಲ್ಲಿದೆ. 3.51 ಕಿ.ಮೀ ಉದ್ದದ ಮೇಲ್ಗಾಲುವೆಯು ಪೂರ್ಣಗೊಳ್ಳುವ ಹಂತದಲ್ಲಿದೆ. |
| 11 | ಹಾಸನ | ಎತ್ತಿನಹೊಳೆ ಯೋಜನೆಯ ಗುರುತ್ವಾ ಕಾಲುವೆ ಚೈ.0.00 ರಿಂದ 1.50 ಕಿಮೀ ಮತ್ತು 29.14 ರಿಂದ 31.00 ಕಿಮೀ ರವರೆಗೆ ಮಣ್ಣು ಅಗೆತ, ಒಡ್ಡು ನಿರ್ಮಾಣ. ಕಾಂಕ್ರೀಟ್ ಲೈನಿಂಗ್ ಜೊತೆಗೆ ಸಿಡಿ. ಆರ್.ಸಿ.ಸಿ ಟ್ರಫ್ ಅಕ್ವಾಡಕ್ಟ್ ನಿರ್ಮಾಣ -ಪ್ಯಾಕೇಜ್-1 | 126.50 | 5.37 ಕಿ.ಮೀ ಉದ್ದದ ಗುರುತ್ವಾ ಕಾಲುವೆ ಕಾಮಗಾರಿಯಲ್ಲಿ 2.17 ಕಿ.ಮೀ ಮಣ್ಣಿನ ಅಗೆತ ಮತ್ತು 1.98 ಕಿ.ಮೀ ಉದ್ದದ ಸಿ.ಸಿ.ಲೈನಿಂಗ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ. |
| 12 | ಹಾಸನ | ಎತ್ತಿನಹೊಳೆ ಯೋಜನೆಯ ಗುರುತ್ವಾ ಕಾಲುವೆ ಚೈ.24.00 ರಿಂದ 55.00 ಕಿಮೀ ರವರೆಗೆ ಮಣ್ಣು ಅಗೆತ, ಒಡ್ಡು ನಿರ್ಮಾಣ. ಕಾಂಕ್ರೀಟ್ ಲೈನಿಂಗ್ ಜೊತೆಗೆ ಸಿಡಿ, ಆರ್.ಸಿ.ಸಿ ಟ್ರಫ್ ಅಕ್ವಾಡಕ್ಟ್ ನಿರ್ಮಾಣ-ಪ್ಯಾಕೇಜ್-4 | 433.36 | 24.913 ಕಿ.ಮೀ ಉದ್ದದ ಕಾಲುವೆ ಕಾಮಗಾರಿಯಲ್ಲಿ 16.35 ಕಿ.ಮೀ ಉದ್ದದ ಮಣ್ಣಿನ ಅಗೆತ ಕಾಮಗಾರಿಯು ಪೂರ್ಣಗೊಂಡಿದ್ದು, 8.27 ಕಿ.ಮೀ ಸಿ.ಸಿ ಲೈನಿಂಗ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ. 0.6 ಕಿ.ಮೀ ಉದ್ದದ ಮೇಲ್ಗಾಲುವೆ ಕಾಮಗಾರಿಯಲ್ಲಿ 0.2 ಕಿ.ಮೀ ಉದ್ದದ ಮೇಲ್ಗಾಲುವೆಯ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ 0.44 ಕಿ.ಮೀ. 0.55 ಕಿ.ಮೀ ಮತ್ತು 0.50 ಕಿ.ಮೀ ಉದ್ದದ 03 ಸಂಖ್ಯೆ ಚೂಟ್ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |
| 13 | ಹಾಸನ | ಎತ್ತಿನಹೊಳೆ ಯೋಜನೆಯ ಗುರುತ್ವಾ ಕಾಲುವೆ ಚೈ.49.5 ರಿಂದ 50.78 ಕಿಮೀ ರವರೆಗೆ ಮಣ್ಣು ಅಗೆತ. ಒಡ್ಡು ನಿರ್ಮಾಣ. ಕಾಂಕ್ರೀಟ್ ಲೈನಿಂಗ್ ಜೊತೆಗೆ ಸಿಡಿ, ಆರ್.ಸಿ.ಸಿ ಟ್ರಫ್ ಅಕ್ವಾಡಕ್ಟ್ ನಿರ್ಮಾಣ-ಪ್ಯಾಕೇಜ್-5 | 86.18 | 1.27 ಕಿ.ಮೀ ಉದ್ದದ ಕಾಲುವೆ ಕಾಮಗಾರಿಯಲ್ಲಿ 0.84 ಕಿ.ಮೀ ಮಣ್ಣಿನ ಅಗೆತ ಕಾಮಗಾರಿಯು ಪೂರ್ಣಗೊಂಡಿದ್ದು, 0.52 ಕಿ.ಮೀ ಉದ್ದದ ಸಿ.ಸಿ ಲೈನಿಂಗ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ.<br>0.73 ಕಿ.ಮೀ ಉದ್ದದ ಸುರಂಗ ನಿರ್ಮಾಣ ಕಾಮಗಾರಿಯು ಪೂರ್ಣಗೊಂಡಿರುತ್ತದೆ. |
| 14 | ಹಾಸನ | ಎತ್ತಿನಹೊಳೆ ಯೋಜನೆಯ ಗುರುತ್ವಾ ಕಾಲುವೆ ಚೈ.55.00 ರಿಂದ 64.00 ಕಿಮೀ ರವರೆಗೆ ಮಣ್ಣು ಅಗೆತ, ಒಡ್ಡು ನಿರ್ಮಾಣ. ಕಾಂಕ್ರೀಟ್ ಲೈನಿಂಗ್ ಜೊತೆಗೆ ಸಿಡಿ. ಆರ್.ಸಿ.ಸಿ ಟ್ರಫ್ ಅಕ್ವಾಡಕ್ಟ್ ನಿರ್ಮಾಣ-ಪ್ಯಾಕೇಜ್-6 | 214.63 | 7.32 ಕಿ.ಮೀ ಉದ್ದದ ಕಾಲುವೆ ಕಾಮಗಾರಿಯಲ್ಲಿ 4.87 ಕಿ.ಮೀ ಉದ್ದದ ಮಣ್ಣಿನ ಅಗೆತ ಕಾಮಗಾರಿಯು ಪೂರ್ಣಗೊಂಡಿದ್ದು, 2.79 ಕಿ.ಮೀ ಉದ್ದದ ಸಿ.ಸಿ ಲೈನಿಂಗ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ.<br>0.23 ಕಿ.ಮೀ. 0.33 ಕಿ.ಮೀ. 0.55 ಕಿ.ಮೀ ಮತ್ತು 0.57 ಕಿ.ಮೀ ಉದ್ದದ ಒಟ್ಟು 04 ಸಂಖ್ಯೆಯ ಮೇಲ್ಗಾಲುವೆ ಕಾಮಗಾರಿಗಳಲ್ಲಿ 02 ಸಂಖ್ಯೆಯ ಮೇಲ್ಗಾಲುವೆ ಕಾಮಗಾರಿಗಳು ಪೂರ್ಣಗೊಂಡಿದ್ದು 02 ಸಂಖ್ಯೆಯ ಮೇಲ್ಗಾಲುವೆ ಕಾಮಗಾರಿಯು ಪ್ರಗತಿಯಲ್ಲಿರುತ್ತವೆ. |

| ಕ್ರ ಸಂ | ಜಿಲ್ಲೆ | ಯೋಜನೆ/ಕಾಮಗಾರಿ ಹೆಸರು | ಗುತ್ತಿಗೆ ಮೊತ್ತ | ಯೋಜನೆ/ಕಾಮಗಾರಿಯ ಪ್ರಗತಿ |
|---|---|---|---|---|
| 15 | ಹಾಸನ | ಎತ್ತಿನಹೊಳೆ ಯೋಜನಯ ಗುರುತ್ವಾ ಕಾಲುವೆ ಚೈ.64.00 ರಿಂದ 80.00 ಕಿಮೀ ರವರೆಗೆ ಮಣ್ಣು ಅಗೆತ, ಒಡ್ಡು ನಿರ್ಮಾಣ, ಕಾಂಕ್ರೀಟ್ ಲೈನಿಂಗ್ ಜೊತೆಗೆ ಸಿಡಿ, ಆರ್.ಸಿ.ಸಿ ಟ್ರಫ್ ಅಕ್ವಾಡಕ್ಟ್ ನಿರ್ಮಾಣ-ಪ್ಯಾಕೇಜ್-7 | 432.62 | 12.25 ಕಿ.ಮೀ ಉದ್ದದ ಕಾಲುವೆ ಕಾಮಗಾರಿಯಲ್ಲಿ 6.95 ಕಿ.ಮೀ ಮಣ್ಣಿನ ಅಗೆತ ಕಾಮಗಾರಿಯು ಪೂರ್ಣಗೊಂಡಿದ್ದು, 6.50 ಕಿ.ಮೀ ಉದ್ದದ ಸಿ.ಸಿ ಲೈನಿಂಗ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ. 1.63 ಕಿ.ಮೀ ಮತ್ತು 0.73 ಕಿ.ಮೀ ಉದ್ದದ ಮೇಲ್ಗಾಲುವೆ ಕಾಮಗಾರಿಯು ಪೂರ್ಣಗೊಂಡಿರುತ್ತದೆ. 0.81 ಕಿ.ಮೀ ಉದ್ದದ ಟನೆಲ್ ಹಾಗೂ 0.58 ಕಿ.ಮೀ ಉದ್ದದ ಚೂಟ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ. |
| 16 | ಹಾಸನ | ಎತ್ತಿನಹೊಳೆ ಯೋಜನೆಯ ಗುರುತ್ವಾ ಕಾಲುವೆ ಚೈ.80.00 ರಿಂದ 89.00 ಕಿಮೀ ರವರೆಗೆ ಮಣ್ಣು ಅಗೆತ, ಒಡ್ಡು ನಿರ್ಮಾಣ, ಕಾಂಕ್ರೀಟ್ ಲೈನಿಂಗ್ ಜೊತೆಗೆ ಸಿಡಿ, ಆರ್.ಸಿ.ಸಿ ಟ್ರಫ್ ಅಕ್ವಾಡಕ್ಟ್ ನಿರ್ಮಾಣ-ಪ್ಯಾಕೇಜ್-8 | 117.95 | 9.00ಕಿ.ಮೀ ಉದ್ದದ ಕಾಲುವೆ ಕಾಮಗಾರಿಯಲ್ಲಿ 5.33 ಕಿ.ಮೀ ಮಣ್ಣಿನ ಅಗೆತ ಕಾಮಗಾರಿಯು ಪೂರ್ಣಗೊಂಡಿದ್ದು, 2.79 ಕಿ.ಮೀ ಉದ್ದದ ಸಿ.ಸಿ ಲೈನಿಂಗ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ. |
| 17 | ಹಾಸನ | ಎತ್ತಿನಹೊಳೆ ಯೋಜನೆಯ ಗುರುತ್ವಾ ಕಾಲುವೆ ಚೈ.89.00 ರಿಂದ 98.00 ಕಿಮೀ ರವರೆಗೆ ಮಣ್ಣು ಅಗೆತ, ಒಡ್ಡು ನಿರ್ಮಾಣ, ಕಾಂಕ್ರೀಟ್ ಲೈನಿಂಗ್ ಜೊತೆಗೆ ಸಿಡಿ, ಆರ್.ಸಿ.ಸಿ ಟ್ರಫ್ ಅಕ್ವಾಡಕ್ಟ್ ನಿರ್ಮಾಣ-ಪ್ಯಾಕೇಜ್-9 | 136.55 | 8.75 ಕಿ.ಮೀ ಉದ್ದದ ಕಾಲುವೆ ಕಾಮಗಾರಿಯಲ್ಲಿ 8.00 ಕಿ.ಮೀ ಉದ್ದದ ಸಿ.ಸಿ ಲೈನಿಂಗ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ. 0.2 5ಕಿ.ಮೀ ಉದ್ದದ ಮೇಲ್ಗಾಲುವೆ ಕಾಮಗಾರಿಯು ಪೂರ್ಣಗೊಂಡಿರುತ್ತದೆ. |
| 18 | ಹಾಸನ | ಎತ್ತಿನಹೊಳೆ ಯೋಜನೆಯ ಗುರುತ್ವಾ ಕಾಲುವೆ ಚೈ.98.00 ರಿಂದ 100.00 ಕಿಮೀ ರವರೆಗೆ ಮಣ್ಣು ಅಗೆತ, ಒಡ್ಡು ನಿರ್ಮಾಣ, ಕಾಂಕ್ರೀಟ್ ಲೈನಿಂಗ್ ಜೊತೆಗೆ ಸಿಡಿ, ಆರ್.ಸಿ.ಸಿ ಟ್ರಫ್ ಅಕ್ವಾಡಕ್ಟ್ ನಿರ್ಮಾಣ-ಪ್ಯಾಕೇಜ್-10 | 83.07 | 1.25 ಕಿ.ಮೀ ಉದ್ದದ ಕಾಲುವೆ ಕಾಮಗಾರಿಯಲ್ಲಿ 1.25 ಕಿ.ಮೀ ಮಣ್ಣಿನ ಅಗೆತ ಹಾಗೂ ಸಿ.ಸಿ ಲೈನಿಂಗ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ. 0.75 ಕಿ.ಮೀ ಉದ್ದದ ಟನೆಲ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ. |
| 19 | ತುಮಕೂರು | ಎತ್ತಿನಹೊಳೆ ಯೋಜನೆಯಡಿ ಕಿ.ಮೀ 100.00 ರಿಂದ 115.00 ಕಿ.ಮೀ ರವರೆಗೆ ಗುರುತ್ವಾ ಕಾಲುವ ನಿರ್ಮಾಣ ಕಾಮಗಾರಿ (ಮಣ್ಣು ಅಗೆತ, ಏರಿ ನಿರ್ಮಾಣ, ಮೆಕ್ಯಾನಿಕಲ್ ಪೇವರ್ ಬಳಸಿ ಸಿ.ಸಿ ಲೈನಿಂಗ್ ,ಅಡ್ಡ ಮೋರಿಗಳು ಹಾಗೂ ಮೇಲ್ಗಾಲುವೆ ಒಳಗೊಂಡಂತೆ)-ಪ್ಯಾಕೇಜ್-15 | 388.82 | 13.10 ಕಿ.ಮೀ ಉದ್ದದ ಕಾಲುವೆ ಕಾಮಗಾರಿಯಲ್ಲಿ 3.863 ಕಿ.ಮೀ ಮಣ್ಣಿನ ಅಗೆತ ಹಾಗೂ 2.3 ಕಿ.ಮೀ ಸಿ.ಸಿ ಲೈನಿಂಗ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ. 04 ಸಂಖ್ಯೆಯ ಮೇಲ್ಗಾಲುವೆ ಒಟ್ಟು ಉದ್ದ 1.90 ಕಿ.ಮೀ ಕಾಮಗಾರಿಯಲ್ಲಿ 1.63 ಕಿ.ಮೀ ಉದ್ದದ 03 ಸಂಖ್ಯೆಯ ಮೇಲ್ಗಾಲುವೆ ಕಾಮಗಾರಿಯು ಪ್ರಗತಿಯಲ್ಲಿರುತ್ತವೆ. |
| 20 | ತುಮಕೂರು | ಎತ್ತಿನಹೊಳೆ ಯೋಜನೆಯಡಿ ಗುರುತ್ವಾ ಕಾಲುವೆ ಕಿ.ಮೀ 115.00 ರಿಂದ 120.00 ರವರೆಗೆ (ಮಣ್ಣು ಅಗೆತ, ಏರಿ ನಿರ್ಮಾಣ, ಮೆಕ್ಯಾನಿಕಲ್ ಪೇವರ್ ಬಳಸಿ ಸಿ.ಸಿ ಲೈನಿಂಗ್ ,ಅಡ್ಡ ಮೋರಿಗಳು ಹಾಗೂ ಕಿ.ಮೀ 116.760 ರಿಂದ ಕಿ.ಮೀ 118.340 & ಕಿ.ಮೀ 118.830 ರಿಂದ ಕಿ.ಮೀ 120.00 ರವರೆಗಿನ ಮೇಲ್ಗಾಲುವೆ ಒಳಗೊಂಡಂತೆ) ನಿರ್ಮಾಣ ಕಾಮಗಾರಿ-ಪ್ಯಾಕೇಜ್-16 | 485.51 | 5.00 ಕಿ.ಮೀ ಉದ್ದದ ಕಾಲುವೆ ಕಾಮಗಾರಿಯಲ್ಲಿ 2.35 ಕಿ.ಮೀ ಉದ್ದದ ಗುರುತ್ವಾ ಕಾಲುವೆ, 12 ಸಂಖ್ಯೆಯ ಅಡ್ಡಮೋರಿಗಳು ಹಾಗೂ 2 ಸಂಖ್ಯೆಯ ಮೇಲ್ಗಾಲುವೆ (1.48ಕಿ.ಮೀ+1.17ಕಿ.ಮೀ) ಕಾಮಗಾರಿಯನ್ನು ಒಳಗೊಂಡಿರುತ್ತದೆ. 2 ಸಂಖ್ಯೆಯ ಮೇಲ್ಗಾಲುವೆಯ ಉದ್ದ 2.6 5ಕಿ.ಮೀ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ. |
| 21 | ತುಮಕೂರು | ಎತ್ತಿನಹೊಳೆ ಯೋಜನೆಯಡಿ ಗುರುತ್ವಾ ಕಾಲುವೆ ಕಿ.ಮೀ 120.00 ರಿಂದ 127.00 ರವರೆಗೆ (ಮಣ್ಣು ಅಗೆತ, ಏರಿ ನಿರ್ಮಾಣ, ಮೆಕ್ಯಾನಿಕಲ್ ಪೇವರ್ ಬಳಸಿ ಸಿ.ಸಿ ಲೈನಿಂಗ್ ,ಅಡ್ಡ ಮೋರಿಗಳು ಹಾಗೂ ಮೇಲ್ಗಾಲುವೆ ಒಳಗೊಂಡಂತೆ) ನಿರ್ಮಾಣ ಕಾಮಗಾರಿ-ಪ್ಯಾಕೇಜ್-17 | 273.85 | 5.38 ಕಿ.ಮೀ ಉದ್ದದ ಕಾಲುವೆ ಕಾಮಗಾರಿಯಲ್ಲಿ 0.30 ಕಿ.ಮೀ ಮಣ್ಣಿನ ಅಗೆತ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. 27 ಸಂಖ್ಯೆಯ ಅಡ್ಡಮೋರಿಗಳಲ್ಲಿ 01 ಸಂಖ್ಯೆಯ ಅಡ್ಡಮೋರಿಯ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. 2 ಸಂಖ್ಯೆಯ ಮೇಲ್ಗಾಲುವೆ (0.81 ಕಿ.ಮೀ + 0.81 ಕಿ.ಮೀ) ಕಾಮಗಾರಿಯಲ್ಲಿ 01 ಸಂಖ್ಯೆಯ ಮೇಲ್ಗಾಲುವೆ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |
| 22 | ತುಮಕೂರು | ಎತ್ತಿನಹೊಳೆ ಯೋಜನೆಯಡಿ ಗುರುತ್ವಾ ಕಾಲುವೆ ಕಿ.ಮೀ 127.000 ರಿಂದ 137.620 ರವರೆಗೆ (ಮಣ್ಣು ಅಗೆತ, ಏರಿ ನಿರ್ಮಾಣ, ಮೆಕ್ಯಾನಿಕಲ್ ಪೇವರ್ ಬಳಸಿ ಸಿ.ಸಿ ಲೈನಿಂಗ್ ,ಅಡ್ಡ ಮೋರಿಗಳು ಹಾಗೂ ಕಿ.ಮೀ 134.980 ರಿಂದ ಕಿ.ಮೀ 137.620 ರವರೆಗಿನ ಮೇಲ್ಗಾಲುವೆ ಒಳಗೊಂಡಂತೆ) ನಿರ್ಮಾಣ ಕಾಮಗಾರಿ -ಪ್ಯಾಕೇಜ್-18 | 541.00 | 7.50 ಕಿ.ಮೀ ಉದ್ದದ ಕಾಲುವೆ ಕಾಮಗಾರಿಯಲ್ಲಿ 2.64 ಕಿ.ಮೀ ಕಾಮಗಾರಿಯು ಪೂರ್ಣಗೊಂಡಿದ್ದು, ಉಳಿಕೆ 4.86ಕಿ.ಮೀ ಕಾಲುವೆ ಕಾಮಗಾರಿಯನ್ನು ಭೂಸ್ವಾಧೀನಗೊಳ್ಳದ ಪ್ರಯುಕ್ತ ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿರುತ್ತದೆ. 1 ಸಂಖ್ಯೆಯ ಮೇಲ್ಗಾಲುವೆ (2.64ಕಿ.ಮೀ) ಕಾಮಗಾರಿಯು ಪೂರ್ಣಗೊಂಡಿರುತ್ತದೆ. 37 ಸಂಖ್ಯೆಯ ಅಡ್ಡಮೋರಿಗಳಲ್ಲಿ 07 ಸಂಖ್ಯೆಯ ಅಡ್ಡಮೋರಿ ಕಾಮಗಾರಿಗಳು ಪೂರ್ಣಗೊಂಡಿದ್ದು, 01 ಸಂಖ್ಯೆಯ ಅಡ್ಡಮೋರಿ ಪ್ರಗತಿಯಲ್ಲಿರುತ್ತದೆ. |
| 23 | ತುಮಕೂರು | ಎತ್ತಿನಹೊಳೆ ಯೋಜನೆಯಡಿ ಗುರುತ್ವಾ ಕಾಲುವೆ ಕಿ.ಮೀ 137.620 ರಿಂದ 140.700 ರವರೆಗೆ (ಮಣ್ಣು ಅಗೆತ, ಏರಿ ನಿರ್ಮಾಣ, ಮೆಕ್ಯಾನಿಕಲ್ ಪೇವರ್ ಬಳಸಿ ಸಿ.ಸಿ ಲೈನಿಂಗ್ ,ಅಡ್ಡ ಮೋರಿಗಳು ಹಾಗೂ ಕಿ.ಮೀ 137.620 ರಿಂದ ಕಿ.ಮೀ 139.510 ರವರೆಗಿನ ಮೇಲ್ಗಾಲುವೆ ಒಳಗೊಂಡಂತೆ) ನಿರ್ಮಾಣ ಕಾಮಗಾರಿ-ಪ್ಯಾಕೇಜ್-19 | 203.69 | 1.37 ಕಿ.ಮೀ ಉದ್ದದ ಗುರುತ್ವಾ ಕಾಲುವೆ ಕಾಮಗಾರಿಯನ್ನು ಭೂಸ್ವಾಧೀನ ವಿಳಂಬದಿಂದ ಕಾಮಗಾರಿಯನ್ನು ಪ್ರಾರಂಭಿಸಲಾಗಿರುವುದಿಲ್ಲ. 1.71 ಕಿ.ಮೀ ಉದ್ದದ ಮೇಲ್ಗಾಲುವೆ ಕಾಮಗಾರಿಯು ಪೂರ್ಣಗೊಂಡಿರುತ್ತದೆ. |
| 24 | ತುಮಕೂರು | ಎತ್ತಿನಹೊಳೆ ಯೋಜನೆಯಡಿ ಗುರುತ್ವಾ ಕಾಲುವೆ ಕಿ.ಮೀ 140.700 ರಿಂದ 146.000 ರವರೆಗೆ (ಮಣ್ಣು ಅಗೆತ, ಏರಿ ನಿರ್ಮಾಣ, ಮೆಕ್ಯಾನಿಕಲ್ ಪೇವರ್ ಬಳಸಿ ಸಿ.ಸಿ ಲೈನಿಂಗ್ ,ಅಡ್ಡ ಮೋರಿಗಳು ಹಾಗೂ ಕಿ.ಮೀ 140.700 ರಿಂದ ಕಿ.ಮೀ 142.110 ರವರೆಗಿನ ಬೃಹತ್ ಮೇಲ್ಗಾಲುವೆ ಒಳಗೊಂಡಂತೆ) ನಿರ್ಮಾಣ ಕಾಮಗಾರಿ -ಪ್ಯಾಕೇಜ್-20 | 226.07 | 3.83 ಕಿ.ಮೀ ಉದ್ದದ ಗುರುತ್ವಾ ಕಾಲುವೆ ಕಾಮಗಾರಿಯಲ್ಲಿ 0.15 ಕಿ.ಮೀ ಉದ್ದದ ಕಾಲುವೆಯು ಪೂರ್ಣಗೊಂಡಿದ್ದು, ಉಳಿಕೆ 3.68 ಕಿ.ಮೀ ಕಾಲುವೆ ಕಾಮಗಾರಿಯನ್ನು ಭೂಸ್ವಾಧೀನ ವಿಳಂಬದಿಂದ ಪ್ರಾರಂಭಿಸಿರುವುದಿಲ್ಲ 1.47 ಕಿ.ಮೀ ಉದ್ದದ ಮೇಲ್ಗಾಲುವೆ ಕಾಮಗಾರಿಯಲ್ಲಿ 0.73 ಕಿ.ಮೀ ಉದ್ದದ ಮೇಲ್ಗಾಲುವೆ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |

| ಕ್ರ ಸಂ | ಜಿಲ್ಲೆ | ಯೋಜನೆ/ಕಾಮಗಾರಿ ಹೆಸರು | ಗುತ್ತಿಗೆ ಮೊತ್ತ | ಯೋಜನೆ/ಕಾಮಗಾರಿಯ ಪ್ರಗತಿ |
|---|---|---|---|---|
| 25 | ತುಮಕೂರು | ಎತ್ತಿನಹೊಳೆ ಯೋಜನೆಯಡಿ ಗುರುತ್ವಾ ಕಾಲುವೆ ಕಿ.ಮೀ 146.000 ರಿಂದ 156.000 ರವರೆಗೆ (ಮಣ್ಣು ಅಗೆತ, ಏರಿ ನಿರ್ಮಾಣ, ಮೆಕ್ಯಾನಿಕಲ್ ಪೇವರ್ ಬಳಸಿ ಸಿ.ಸಿ ಲೈನಿಂಗ್ .ಅಡ್ಡ ಮೋರಿಗಳು ಒಳಗೊಂಡಂತೆ) ನಿರ್ಮಾಣ ಕಾಮಗಾರಿ-ಪ್ಯಾಕೇಜ್-21 | 106.92 | 10.00 ಕಿ.ಮೀ ಉದ್ದದ ಗುರುತ್ವಾ ಕಾಲುವೆ ಕಾಮಗಾರಿಯಲ್ಲಿ 0.20 ಕಿಮೀ ಅಗೆತದ ಕಾಮಗಾರಿಯು ಪೂರ್ಣಗೊಂಡಿರುತ್ತದೆ. |
| 26 | ತುಮಕೂರು | ಎತ್ತಿನಹೊಳೆ ಯೋಜನೆಯಡಿ ಗುರುತ್ವಾ ಕಾಲುವೆ ಕಿ.ಮೀ 156.000 ರಿಂದ 161.203 ರವರೆಗೆ (ಮಣ್ಣು ಅಗೆತ, ಏರಿ ನಿರ್ಮಾಣ, ಮೆಕ್ಯಾನಿಕಲ್ ಪೇವರ್ ಬಳಸಿ ಸಿ.ಸಿ ಲೈನಿಂಗ್,ಅಡ್ಡ ಮೋರಿಗಳು ಒಳಗೊಂಡಂತೆ) ಹಾಗೂ ಕಿ.ಮೀ 157.350 ರಿಂದ 157.980 ಕಿ.ಮೀ ವರೆಗೆ ಮೇಲ್ಗಾಲುವೆ ನಿರ್ಮಾಣ ಕಾಮಗಾರಿ-ಪ್ಯಾಕೇಜ್-22 | 132.81 | 5.20 ಕಿ.ಮೀ ಉದ್ದದ ಗುರುತ್ವಾ ಕಾಲುವೆ ಕಾಮಗಾರಿಯಲ್ಲಿ 4.57 ಕಿ.ಮೀ ಉದ್ದದ ಕಾಲುವೆ. 13 ಸಂಖ್ಯೆಯ ಅಡ್ಡಮೋರಿಗಳು ಹಾಗೂ 1 ಸಂಖ್ಯೆಯ ಮೇಲ್ಗಾಲುವೆ (0.63ಕಿ.ಮೀ) ಕಾಮಗಾರಿಯನ್ನು ಒಳಗೊಂಡಿರುತ್ತದೆ. 4.57 ಕಿ.ಮೀ ಉದ್ದದ ಕಾಲುವೆ ಕಾಮಗಾರಿಯಲ್ಲಿ 1.85 ಕಿ.ಮೀ ಅಗೆತದ ಕಾಮಗಾರಿ ಹಾಗೂ 0.420 ಕಿ.ಮೀ ಸಿ.ಸಿ ಲೈನಿಂಗ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ. 0.53 ಕಿ.ಮೀ ಉದ್ದದ ಮೇಲ್ಗಾಲುವೆ ಕಾಮಗಾರಿಯು ಪೂರ್ಣಗೊಂಡಿದ್ದು, ಉಳಿಕೆ 0.1 ಕಿ.ಮೀ ಉದ್ದದ ಮೇಲ್ಗಾಲುವೆ ಕಾಮಗಾರಿಯನ್ನು ಭೂಸ್ವಾಧೀನ ವಿಳಂಬದಿಂದ ಪ್ರಾರಂಭಿಸಿರುವುದಿಲ್ಲ. |
| 27 | ತುಮಕೂರು | ಎತ್ತಿನಹೊಳೆ ಯೋಜನೆಯಡಿ ಗುರುತ್ವಾ ಕಾಲುವೆ ಗುರುತ್ವಾ ಕಾಲುವೆ ಕಿ.ಮೀ 170.287 ರಿಂದ 177.270 ಮತ್ತು 182.220 ರಿಂದ 182.500 ರವರೆಗಿನ (ಮಣ್ಣು ಅಗೆತ. ಏರಿ ನಿರ್ಮಾಣ. ಮೆಕ್ಯಾನಿಕಲ್ ಪೇವರ್ ಬಳಸಿ ಸಿ.ಸಿ ಲೈನಿಂಗ್ ಮತ್ತು ಇತರೆ ಕಟ್ಟಡಗಳ ನಿರ್ಮಾಣ) ಹಾಗೂ ಕಿ.ಮೀ 177.270 ರಿಂದ 182.220 ವರೆಗೆ ಮೇಲ್ಗಾಲುವೆ ನಿರ್ಮಾಣ ಕಾಮಗಾರಿ-ಪ್ಯಾಕೇಜ್-11 | 443.83 | 7.263 ಕಿ.ಮೀ ಉದ್ದದ ಕಾಲುವೆ ಕಾಮಗಾರಿಯಲ್ಲಿ 2.96 ಕಿ.ಮೀ ಉದ್ದದ ಮಣ್ಣಿನ ಅಗೆತ ಪೂರ್ಣಗೊಂಡಿದ್ದು, 0.28ಕಿ.ಮೀ ಉದ್ದದ ಸಿ.ಸಿ ಲೈನಿಂಗ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ ಉಳಿಕೆ 2.4ಕಿ.ಮೀ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕಾಗಿದೆ ಹಾಗೂ 1.9ಕಿ.ಮೀ ಉದ್ದಕ್ಕೆ ಅರಣ್ಯ ತೀರುವಳಿ ಬಾಕಿ ಇರುವ ಪ್ರಯುಕ್ತ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ.<br>4.95ಕಿ.ಮೀ ಉದ್ದದ ಮೇಲ್ಗಾಲುವೆ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |
| 28 | ತುಮಕೂರು | ಎತ್ತಿನಹೊಳೆ ಯೋಜನೆಯಡಿ ಗುರುತ್ವಾ ಕಾಲುವೆ ಗುರುತ್ವಾ ಕಾಲುವೆ ಕಿ.ಮೀ 182.500 ರಿಂದ 182.530 ಮತ್ತು ಕಿ.ಮೀ 183.210 ರಿಂದ 198.000 (ಮಣ್ಣು ಅಗೆತ. ಏರಿ ನಿರ್ಮಾಣ. ಮೆಕ್ಯಾನಿಕಲ್ ಪೇವರ್ ಬಳಸಿ ಸಿ.ಸಿ ಲೈನಿಂಗ್ ಮತ್ತು ಇತರೆ ಕಟ್ಟಡಗಳ ನಿರ್ಮಾಣ) ಹಾಗೂ ಕಿ.ಮೀ 182.530 ರಿಂದ 183.210 ವರೆಗೆ ಮೇಲ್ಗಾಲುವೆ ನಿರ್ಮಾಣ ಕಾಮಗಾರಿ ಪ್ಯಾಕೇಜ್-12 | 180.25 | 14.82 ಕಿ.ಮೀ ಉದ್ದದ ಕಾಲುವೆ ಕಾಮಗಾರಿಯಲ್ಲಿ 9.90 ಕಿ.ಮೀ ಮಣ್ಣಿನ ಕಾಮಗಾರಿಯು ಪೂರ್ಣಗೊಂಡಿರುತ್ತದೆ. 0.68 ಕಿ.ಮೀ ಉದ್ದದ ಮೇಲ್ಗಾಲುವೆ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ |
| 29 | ತುಮಕೂರು | ಎತ್ತಿನಹೊಳೆ ಯೋಜನೆಯಡಿ ಗುರುತ್ವಾ ಕಾಲುವೆ ಕಿ.ಮೀ 198.000 ರಿಂದ 199.620 ರವರೆಗಿನ (ಮಣ್ಣು ಅಗೆತ, ಏರಿ ನಿರ್ಮಾಣ, ಮೆಕ್ಯಾನಿಕಲ್ ಪೇವರ್ ಬಳಸಿ ಸಿ.ಸಿ ಲೈನಿಂಗ್ ಮತ್ತು ಇತರ ಕಟ್ಟಡಗಳ ನಿರ್ಮಾಣ ಕಾಮಗಾರಿ) ಹಾಗೂ ಕಿ.ಮೀ 199.620 ರಿಂದ 201.880 ವರೆಗೆ ಬೃಹತ್ ಮೇಲ್ಗಾಲುವೆ ನಿರ್ಮಾಣ ಕಾಮಗಾರಿ -ಪ್ಯಾಕೇಜ್-1 | 235.39 | 1.62 ಕಿ.ಮೀ ಉದ್ದದ ಕಾಲುವೆ ಕಾಮಗಾರಿಯಲ್ಲಿ 0.80 ಕಿ.ಮೀ ಮಣ್ಣಿನ ಅಗೆತ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. 2.26 ಕಿ.ಮೀ ಉದ್ದ ಮೇಲ್ಗಾಲುವೆ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ. |
| 30 | ತುಮಕೂರು | ಎತ್ತಿನಹೊಳೆ ಯೋಜನೆಯಡಿ ಗುರುತ್ವಾ ಕಾಲುವೆ ಕಿ.ಮೀ 201.880 ರಿಂದ 206.350ವರೆಗೆ ಬೃಹತ್ ಮೇಲ್ಗಾಲುವೆ ನಿರ್ಮಾಣ ಕಾಮಗಾರಿ. (93.50 ಕ್ಯೂಮೆಕ್ಸ್ ನೀರಿನ ಒಳಹರಿವು ಒಳಗೊಂಡಂತೆ)-ಪ್ಯಾಕೇಜ್-2 | 429.15 | 4.47 ಕಿ.ಮೀ ಉದ್ದದ ಮೇಲ್ಗಾಲುವೆ ಕಾಮಗಾರಿಯು ಪೂರ್ಣಗೊಂಡಿರುತ್ತದೆ. Joint treatment ನಿರ್ವಹಿಸಬೇಕಾಗಿರುತ್ತದ |
| 31 | ತುಮಕೂರು | ಎತ್ತಿನಹೊಳೆ ಯೋಜನೆಯಡಿ ಗುರುತ್ವಾ ಕಾಲುವೆ ಕಿ.ಮೀ 206.35 ರಿಂದ 210.090 ವರೆಗೆ ಬೃಹತ್ ಮೇಲ್ಗಾಲುವೆ ನಿರ್ಮಾಣ ಕಾಮಗಾರಿ. ಪ್ಯಾಕೇಜ್-3 | 344.92 | 3.74 ಕಿ.ಮೀ ಉದ್ದದ ಮೇಲ್ಗಾಲುವೆ ಕಾಮಗಾರಿಯಲ್ಲಿ 3.26 ಕಿ.ಮೀ ಉದ್ದದ ಮೇಲ್ಗಾಲುವೆ ಪೂರ್ಣಗೊಂಡಿರುತ್ತದೆ |
| 32 | ತುಮಕೂರು | ಎತ್ತಿನಹೊಳೆ ಯೋಜನೆಯಡಿ ಕಿ.ಮೀ 210.090 ರಿಂದ 222.00 ರವರೆಗೆ ಗುರುತ್ವಾ ಕಾಲುವೆ ನಿರ್ಮಾಣ ಕಾಮಗಾರಿ (ಮಣ್ಣು ಅಗೆತ, ಏರಿ ನಿರ್ಮಾಣ, ಮೆಕ್ಯಾನಿಕಲ್ ಪೇವರ್ ಬಳಸಿ ಸಿ.ಸಿ ಲೈನಿಂಗ್ ಮತ್ತು ಅಡ್ಡ ಮೋರಿಗಳ ನಿರ್ಮಾಣ ಒಳಗೊಂಡಂತೆ) ಹಾಗೂ ಕಿ.ಮೀ 219.420 ರಿಂದ 221.740 ವರೆಗೆ ಮೇಲ್ಗಾಲುವೆ ನಿರ್ಮಾಣ ಕಾಮಗಾರಿ ಪ್ಯಾಕೇಜ್-13 | 315.21 | 9.59 ಕಿ.ಮೀ ಉದ್ದದ ಕಾಲುವೆ ಕಾಮಗಾರಿಯಲ್ಲಿ 5.50 ಕಿ.ಮೀ ಉದ್ದದ ಮಣ್ಣಿನ ಅಗೆತ ಹಾಗೂ ಸಿ.ಸಿ.ಲೈನಿಂಗ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ. 2.32 ಕಿ.ಮೀ ಉದ್ದದ ಮೇಲ್ಗಾಲುವೆಯಲ್ಲಿ 1.32 ಕಿ.ಮೀ ಪೂರ್ಣಗೊಂಡಿದ್ದು, ಉಳಿಕೆ 1.00 ಕಿ.ಮೀ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ |
| 33 | ತುಮಕೂರು | ಎತ್ತಿನಹೊಳೆ ಯೋಜನೆಯಡಿ ಕಿ.ಮೀ 222.00 ರಿಂದ 240.00 ವರೆಗೆ ಗುರುತ್ವಾ ಕಾಲುವೆ ನಿರ್ಮಾಣ ಕಾಮಗಾರಿ (ಮಣ್ಣು ಅಗೆತ, ಏರಿ ನಿರ್ಮಾಣ, ಮೆಕ್ಯಾನಿಕಲ್ ಪೇವರ್ ಬಳಸಿ ಸಿ.ಸಿ ಲೈನಿಂಗ್ ಮತ್ತು ಅಡ್ಡ ಮೋರಿಗಳು ಹಾಗೂ ಇತರೆ ಕಟ್ಟಡಗಳನ್ನು ಒಳಗೊಂಡಂತೆ)-ಪ್ಯಾಕೇಜ್-14 | 246.66 | 18.00 ಕಿ.ಮೀ ಉದ್ದದ ಕಾಲುವೆ ಕಾಮಗಾರಿಯಲ್ಲಿ 5.93 ಕಿ.ಮೀ ಗುರುತ್ವಾ ಕಾಲುವೆ ಮಣ್ಣಿನ ಅಗೆತ ಪೂರ್ಣಗೊಂಡಿದ್ದು, 2.93 ಕಿಮೀ ಸಿಸಿ ಲೈನಿಂಗ್ ಪೂರ್ಣಗೊಂಡಿರುತ್ತದೆ. 0.24 ಕಿ.ಮೀ ಉದ್ದದ ಟನೆಲ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ. |

| ಕ್ರ ಸಂ | ಜಿಲ್ಲೆ | ಯೋಜನೆ/ಕಾಮಗಾರಿ ಹೆಸರು | ಗುತ್ತಿಗೆ ಮೊತ್ತ | ಯೋಜನೆ/ಕಾಮಗಾರಿಯ ಪ್ರಗತಿ |
|---|---|---|---|---|
| 34 | ತುಮಕೂರು | ಎತ್ತಿನಹೊಳೆ ಯೋಜನೆಯಡಿ ಗುರುತ್ವಾ ಕಾಲುವೆ ಕಿ.ಮೀ 240.000 ರಿಂದ 244.35 ರವರೆಗೆ (ಮಣ್ಣು ಅಗೆತ, ಏರಿ ನಿರ್ಮಾಣ, ಮೆಕ್ಯಾನಿಕಲ್ ಪೇವರ್ ಬಳಸಿ ಸಿ.ಸಿ ಲೈನಿಂಗ್,ಅಡ್ಡ ಮೋರಿಗಳು ಒಳಗೊಂಡಂತೆ) ನಿರ್ಮಾಣ ಕಾಮಗಾರಿ- ಪ್ಯಾಕೇಜ್-23 | 494.84 | 4.35 ಕಿ.ಮೀ ಉದ್ದದ ಗುರುತ್ವಾ ಕಾಲುವೆ ಕಾಮಗಾರಿಯಲ್ಲಿ 2.10 ಕಿ.ಮೀ ಉದ್ದದ ಕಾಲುವೆ, 12 ಸಂಖ್ಯೆಯ ಅಡ್ಡಮೋರಿಗಳು ಹಾಗೂ 1 ಸಂಖ್ಯೆಯ ಮೇಲ್ಗಾಲುವೆ (2.25ಕಿ.ಮೀ) ಕಾಮಗಾರಿಯನ್ನು ಒಳಗೊಂಡಿರುತ್ತದೆ. 2.10 ಕಿ.ಮೀ ಉದ್ದದ ಕಾಲುವೆ ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿರುತ್ತದೆ. 2.25 ಕಿ.ಮೀ ಉದ್ದದ ಮೇಲ್ಗಾಲುವೆ ಕಾಮಗಾರಿಯಲ್ಲಿ 0.77 ಕಿಮೀ ಉದ್ದದ ಮೇಲ್ಗಾಲುವೆ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |
| 35 | ತುಮಕೂರು | ಎತ್ತಿನಹೊಳೆ ಯೋಜನೆಯಡಿ ಗುರುತ್ವಾ ಕಾಲುವೆ ಕಿ.ಮೀ 244.350 ರಿಂದ 249.15 ರವರೆಗೆ (ಮಣ್ಣು ಅಗೆತ, ಏರಿ ನಿರ್ಮಾಣ, ಮೆಕ್ಯಾನಿಕಲ್ ಪೇವರ್ ಬಳಸಿ ಸಿ.ಸಿ ಲೈನಿಂಗ್,ಅಡ್ಡ ಮೋರಿಗಳು ಒಳಗೊಂಡಂತೆ) ನಿರ್ಮಾಣ ಕಾಮಗಾರಿ - ಪ್ಯಾಕೇಜ್-24 | 162.62 | 4.80 ಕಿ.ಮೀ ಉದ್ದದ ಗುರುತ್ವಾ ಕಾಲುವೆ ಕಾಮಗಾರಿಯಲ್ಲಿ 4.29 ಕಿ.ಮೀ ಉದ್ದದ ಕಾಲುವೆ, 14 ಸಂಖ್ಯೆಯ ಅಡ್ಡಮೋರಿಗಳು ಹಾಗೂ 1 ಸಂಖ್ಯೆಯ ಮೇಲ್ಗಾಲುವೆ (0.33ಕಿ.ಮೀ) ಕಾಮಗಾರಿ ಹಾಗೂ 0.18ಕಿ.ಮೀ ಉದ್ದದ ಟನೆಲ್ ಕಾಮಗಾರಿಯನ್ನು ಒಳಗೊಂಡಿರುತ್ತದೆ. 4.29 ಕಿ.ಮೀ ಉದ್ದದ ಕಾಲುವೆಯಲ್ಲಿ 1.70 ಕಿ.ಮೀ ಉದ್ದ ಅಗೆತದ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. 0.33 ಕಿಮೀ ಉದ್ದ ಮೇಲ್ಗಾಲುವೆ ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿರುತ್ತದೆ. |
| 36 | ತುಮಕೂರು | ಎತ್ತಿನಹೊಳೆ ಯೋಜನೆಯಡಿ ಗುರುತ್ವಾ ಕಾಲುವೆಯ ಕಿ.ಮೀ 249.15 ರಿಂದ 255.00 ವರೆಗೆ ನಿರ್ಮಾಣ ಕಾಮಗಾರಿ - ಪ್ಯಾಕೇಜ್- 25 | 177.59 | 5.85 ಕಿ.ಮೀ ಉದ್ದದ ಗುರುತ್ವಾ ಕಾಲುವೆ ಕಾಮಗಾರಿಯಲ್ಲಿ ಸಂಖ್ಯೆಯ ಅಡ್ಡಮೋರಿಗಳು ಹಾಗೂ 0.54 (0.27+0.27) ಕಿ.ಮೀ ಉದ್ದದ 2 ಟನೆಲ್ ಕಾಮಗಾರಿಯನ್ನು ಒಳಗೊಂಡಿರುತ್ತದೆ. 5.31 ಕಿ.ಮೀ ಉದ್ದದ ಕಾಲುವೆ ಕಾಮಗಾರಿಯಲ್ಲಿ 0.30 ಕಿ.ಮೀ ಉದ್ದದ ಕಾಮಗಾರಿಯ ಭೂ ಅಗೆತ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |
| 37 | ತುಮಕೂರು | ಎತ್ತಿನಹೊಳೆ ಯೋಜನೆಯಡಿ ಗುರುತ್ವಾ ಕಾಲುವೆಯ ಕಿ.ಮೀ 255.00 ರಿಂದ 258.97 ವರೆಗೆ ಮಣ್ಣು ಅಗೆತ, ಏರಿ ನಿರ್ಮಾಣ , ಮೆಕ್ಯಾನಿಕಲ್ ಪೇವರ್ ಬಳಸಿ ಸಿ.ಸಿ ಲೈನಿಂಗ್, ಅಡ್ಡ ಮೋರಿಗಳು ಒಳಗೊಂಡಂತೆ) ನಿರ್ಮಾಣ ಕಾಮಗಾರಿ ಪ್ಯಾಕೇಜ್-26 | 131.99 | 3.90 ಕಿ.ಮೀ ಉದ್ದದ ಗುರುತ್ವಾ ಕಾಲುವೆ ಕಾಮಗಾರಿಯಲ್ಲಿ 2.90 ಕಿ.ಮೀ ಉದ್ದದ ಕಾಲುವೆ, 16 ಸಂಖ್ಯೆಯ ಅಡ್ಡಮೋರಿಗಳು, 0.39 ಕಿ.ಮೀ ಉದ್ದದ ಟನೆಲ್ ಹಾಗೂ 0.45 ಕಿ.ಮೀ ಉದ್ದದ ಮೇಲ್ಗಾಲುವೆ ಕಾಮಗಾರಿಯನ್ನು ಒಳಗೊಂಡಿದ್ದು, ಸದರಿ ಕಾಮಗಾರಿಯಲ್ಲಿ 0.4 ಕಿ.ಮೀ ಉದ್ದದ ಭೂ ಅಗೆತದ ಕಾಮಗಾರಿ ಪ್ರಗತಿಯಲ್ಲಿರುತ್ತದೆ. |
| 38 | ತುಮಕೂರು ಮತ್ತು ಬೆಂಗಳೂರು ಗ್ರಾಮಾಂತರ | ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕಿನ ಬೈರಗೊಂಡ್ಲು ಹಳ್ಳಿಯ ಹತ್ತಿರ ಸಂಗ್ರಹಣಾ ಜಲಾಶಯದ ನಿರ್ಮಾಣ ಕಾಮಗಾರಿ. | 592.34 | ಕೊರಟಗೆರೆ ತಾಲ್ಲೂಕು ರೈತರುಗಳು "ಏಕರೂಪ ದರ" ನಿಗಧಿ ಕುರಿತು ತೀವ್ರ ವಿರೋಧ ವ್ಯಕ್ತ ಪಡಿಸಿರುವ ಹಿನ್ನೆಲೆಯಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲಾಗಿರುವುದಿಲ್ಲ. |
| 39 | ತುಮಕೂರು | ಎತ್ತಿನಹೊಳೆ ಯೋಜನೆಯ ಮಧುಗಿರಿ ಗುರುತ್ವಾ ಫೀಡರ್ ಕಾಲುವೆ 0.00 ಕಿ.ಮೀ ಯಿಂದ 1.710 ಕಿ.ಮೀ. ನಿರ್ಮಾಣ ಹಾಗೂ ಎಂ.ಎಸ್ ಪೈಪುಗಳ ವಿತರಣೆ, ಅಳವಡಿಕೆ, ಪರೀಕ್ಷೆ ಹಾಗೂ ಸಿದ್ಧಪಡಿಸುವಿಕೆ ಹಾಗೂ ಕಿ.ಮೀ 1.710 ರಿಂದ ಕಿ.ಮೀ 38.00 ವರೆಗೆ ಗುರುತ್ವಾ ಕಾಲುವೆ ನಿರ್ಮಾಣ ಕಾಮಗಾರಿ ಒಳಗೊಂಡಂತೆ ಅಡ್ಡ ಮೋರಿ ಕೆಲಸಗಳು ಒಳಗೊಂಡಂತೆ ಮಧುಗಿರಿ ಫೀಡರ್ ಕಾಲುವೆ ನಿರ್ಮಾಣ ಕಾಮಗಾರಿ ನಿರ್ಮಾಣ ಕಾಮಗಾರಿ (ಪ್ಯಾಕೇಜ್- 1) | 751.64 | ಫೀಡರ್ ನಾಲೆ ಕಾಮಗಾರಿಯಲ್ಲಿ ಒಟ್ಟು 38.00 ಕಿ.ಮೀ ನಲ್ಲಿ ತೆರೆದ ನಾಲೆ 1.71 ಕಿಮೀ ಉದ್ದವಿದ್ದು, ಇದರಲ್ಲಿ 0.40 ಕಿಮೀ ಮಣ್ಣು ಅಗೆತ ಪ್ರಗತಿಯಲ್ಲಿದೆ.<br>2) ಗುರುತ್ವಾ ನಾಲೆ (ಪೈಪ್) 36.29 ಕಿಮೀ ಪೈಕಿ 32.50 ಕಿಮೀ ಮಣ್ಣು ಅಗೆತ ಪೂರ್ಣಗೊಂಡಿದ್ದು, 0.40 ಕಿಮೀ ಮಣ್ಣು ಅಗೆತ ಪ್ರಗತಿಯಲ್ಲಿದೆ.<br>3) ಒಟ್ಟು 36.656 ಕಿಮೀ ರಷ್ಟು ಪೈಪ್‌ನ್ನು ಶೇಖರಿಸಲಾಗಿದ್ದು, 0.40 ಕಿಮೀ ಉದ್ದ ಕಾಮಗಾರಿ ನಿರ್ವಹಿಸಲು ಸ್ಥಳವಕಾಶವಿರುತ್ತದೆ. 32.3 1ಕಿಮೀ ವರೆಗೆ ಪೈಪ್ ಅಳವಡಿಸಲಾಗಿದೆ. |
| 40 | ತುಮಕೂರು | ಎತ್ತಿನಹೊಳೆ ಯೋಜನೆಯ ಮಧುಗಿರಿ ಗುರುತ್ವಾ ಫೀಡರ್ ಕಾಲುವೆ ಕಿ.ಮೀ.38.00 ಯಿಂದ 120.488 ಕಿ.ಮೀವರೆಗೆ ನಿರ್ಮಾಣ ಕಾಮಗಾರಿ (ಪ್ಯಾಕೇಜ್- ll) | 610.30 | 61.520 ಕಿಮೀ ಮಣ್ಣು ಅಗೆತ ಪೂರ್ಣಗೊಂಡಿರುತ್ತದೆ. 0.52 ಕಿಮೀ ಮಣ್ಣು ಅಗೆತ ಕಾಮಗಾರಿ ಪ್ರಗತಿಯಲ್ಲಿದ್ದೆ, 3.01 ಕಿಮೀ ಉದ್ದಕ್ಕೆ ಆಗುವಷ್ಟು ಪೈಪ್‌ಗಳನ್ನು ಕಾಮಗಾರಿ ಸ್ಥಳದಲ್ಲಿ ಶೇಖರಿಸಲಾಗಿದೆ. 52.90 ಕಿಮೀ ಉದ್ದಕ್ಕೆ ಪೈಪ್ ಭೂಮಿಯಲ್ಲಿ ಅಳವಡಿಸಲಾಗಿರುತ್ತದೆ. |
| 41 | ತುಮಕೂರು, ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ | ಎತ್ತಿನಹೊಳೆ ಯೋಜನೆಯಡಿಯ ಟಿ.ಜಿ.ಹಳ್ಳಿ & ರಾಮನಗರ ಫೀಡರ್ ಕಾಲುವೆ (ಉದ್ದ 52.89 ಕಿ.ಮೀ) ಹಾಗೂ ಏತ ಘಟಕಗಳು ಒಳಗೊಂಡಂತೆ (ಉದ್ದ 12.06.ಕಿ.ಮೀ) ನಿರ್ಮಾಣ ಕಾಮಗಾರಿ | 1325.96 | ಗುರುತ್ವಾ ಕಾಲುವೆ ಒಟ್ಟು 52.72 ಕಿ.ಮೀ ನಿರ್ಮಾಣ ಕಾಮಗಾರಿಯಲ್ಲಿ 38.40 ಕಿ.ಮೀ ಉದ್ದಕ್ಕೆ ಮಣ್ಣು ಅಗೆತ ಪೂರ್ಣಗೊಂಡಿದ್ದು, 38.40 ಕಿಮೀ ವರೆಗೆ ವಿವಿಧ ಪೈಪ್‌ಲೈನ್ ಅಳವಡಿಸಲಾಗಿದೆ |
| 42 | ತುಮಕೂರು, ಬೆಂಗಳೂರು ಗ್ರಾಮಾಂತರ ಮತ್ತು ಚಿಕ್ಕಬಳ್ಳಾಪುರ | ಎತ್ತಿನಹೊಳೆ ಯೋಜನೆಯ ಗೌರಿಬಿದನೂರು ಫೀಡರ್ ಕಾಲುವೆ 0.00 ಕಿ.ಮೀ ಯಿಂದ 81.60 ಕಿ.ಮೀ ವರೆಗೆಎಂ.ಎಸ್ ಪೈಪುಗಳ ವಿತರಣೆ, ಅಳವಡಿಕೆ, ಪರೀಕ್ಷೆ ಹಾಗೂ ಸಿದ್ಧಪಡಿಸುವಿಕೆ ಹಾಗೂ ಅಡ್ಡ ಮೋರಿ ಕೆಲಸಗಳು ಒಳಗೊಂಡಂತೆ ಗೌರಿಬಿದನೂರು ಫೀಡರ್ ಕಾಲುವೆ ನಿರ್ಮಾಣ ಕಾಮಗಾರಿ | 863.48 | ಗೌರಿಬಿದನೂರು ಗುರುತ್ವಾ ಫೀಡರ್ ಕಾಲುವೆ ಕಾಮಗಾರಿಯಲ್ಲಿ 65.54 ಕಿ.ಮೀ ಉದ್ದಕ್ಕೆ ಮಣ್ಣು ಅಗೆತ ಕಾಮಗಾರಿ ಪೂರ್ಣಗೊಂಡಿದ್ದು, 63.53 ಕಿಮೀ ಪೈಪ್‌ಗಳನ್ನು ಭೂಮಿಯಲ್ಲಿ ಅಳವಡಿಸಲಾಗಿರುತ್ತದೆ. 16.00 ಕಿಮೀ ಉದ್ದಕ್ಕೆ ವಿವಿಧ ವ್ಯಾಸದ ಪೈಪ್‌ಗಳನ್ನು ಕಾಮಗಾರಿ ಸ್ಥಳದಲ್ಲಿ ಶೇಖರಿಸಲಾಗಿರುತ್ತದೆ. ಸದರಿ ಕಾಮಗಾರಿ ಅಡಿಯಲ್ಲಿ 2.00 ಕಿಮೀ ಉದ್ದಕ್ಕೆ ಕಾಮಗಾರಿ ನಿರ್ವಹಿಸಲು ಜಮೀನು ಲಭ್ಯವಿದ್ದು ಕಾಮಗಾರಿ ಪ್ರಗತಿಯಲ್ಲರುತ್ತದೆ. |